ವಿಜಯಪುರ । ಸಂಪುಟ 04 । ಸಂಚಿಕೆ 244 । ಪುಟ 04 । ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ರವಿವಾರ, ನವೆಂಬರ್ 22, 2026



"ನನಗೆ ಸಿಎಂ ರಾಜಕೀಯ ಕಾರ್ಯದರ್ಶಿ ಹುದ್ದೆ ಬೇಡ ಎಂದು ಹೇಳಿಕೊಂಡೇ ಬಂದಿದ್ದೇನೆ. ಮುಖ್ಯಮಂತ್ರಿ ಅವರಿಗೆ ರಾಜಕೀಯವಾಗಿ ಶಕ್ತಿ ತುಂಬುವ ಕೆಲಸವನ್ನು ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ನನ್ನ ಹಿರಿತನಕ್ಕೆ ತಕ್ಕ ಸ್ಥಾನವನ್ನು ಕಲ್ಪಿಸುತ್ತಾರೆ ಎಂಬ ವಿಶ್ವಾಸವಿತ್ತು. ಆದರೆ ರಾಜಕೀಯ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ ಎಂಬ ಮಾಹಿತಿ ಬಂದಿದೆ. ಆದರೆ ಈ ಹುದ್ದೆ ನನಗೆ ಸೂಕ್ತವಲ್ಲ."

■ ತನ್ವೀರಸೇಠ

ಶಾಸಕರು, ಮಾಜಿ ಸಚಿವರು

ವಿಜಯಪುರದಲ್ಲಿ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಡಾ.ಎಂ.ಬಿ. ಪಾಟೀಲ ಅಧಿಕಾರಿಗಳಿಗೆ ಸೂಚನೆ

ನೀರನ್ನು ಸಮರ್ಪಕವಾಗಿ ನಿರ್ವಹಿಸಿ, ಕುಡಿವ ನೀರಿಗೆ ಆದ್ಯತೆ ನೀಡಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯಲ್ಲಿ ಲಭ್ಯವಿರುವ ನೀರನ್ನು ಸಮರ್ಪಕವಾಗಿ ನಿರ್ವಹಿಸಿ, ಕುಡಿಯುವ ನೀರಿನ ಅಗತ್ಯಕ್ಕೆ ಮೊದಲ ಆದ್ಯತೆ ನೀಡಬೇಕು. ನೀರಿನ ಹಂಚಿಕೆಯಲ್ಲಿ ಸಮನ್ವಯ ಸಾಧಿಸಿ, ನಿಗದಿತ ಹಂಚಿಕೆಯಂತೆ ಎಲ್ಲ ಪ್ರದೇಶಗಳಿಗೂ ಅದರಲ್ಲೂ ಕೊನೆಯ ಅಂಚಿನ ಪ್ರದೇಶಗಳಿಗೂ ಸಮರ್ಪಕವಾಗಿ ನೀರು ತಲುಪಿಸುವಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ಡಾ.ಎಂ.ಬಿ. ಪಾಟೀಲ ಅವರು ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಮಳೆ ಕೊರತೆಯಿಂದ ನೀರಿನ ಲಭ್ಯತೆ ಕಡಿಮೆಯಾಗಿದೆ. ಪ್ರಸ್ತುತ ಆಲಮಟ್ಟಿ ಜಲಾಶಯದಲ್ಲಿ ನೀರು ಸಂಗ್ರಹ ಕಡಿಮೆ ಇದೆ, ಮುಂಬರುವ ದಿನಗಳಲ್ಲಿ ತ ಮಳೆಯಾಗದಿದ್ದರೆ ನೀರಿನ ನಿರ್ವಹಣೆ ಸವಾಲಾಗಲಿದೆ. ಈ ಹಿನ್ನೆಲೆಯಲ್ಲಿ ನೀರಾವರಿ ಸಚಿವರು, ಈ ಭಾಗದ ಶಾಸಕರು, ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮುಂದಿನ ಅವಧಿಗೆ ನೀರಿನ ಸಮರ್ಪಕ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಕುಡಿಯುವ ನೀರಿಗಾಗಿ ಜಿಲ್ಲೆಗೆ ನಿಗದಿಪಡಿಸಿರುವ ಎರಡು ಟಿಎಂಸಿ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಇಂಡಿ ಹಾಗೂ ನಾಗಠಾಣ ಕ್ಷೇತ್ರಗಳ ಕೆಲವು ಪ್ರದೇಶಗಳಿಗೆ ಇ ನೀರು ತಲುಪಿಸಿ ಗಮನಹರಿಸಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ



ಮೂಲಕ ಯಾವುದೇ ತೊಂದರೆಯಾಗದಂತೆ ನೀರು ಪೂರೈಸಬೇಕು. ಕೆರೆ ತುಂಬಿಸುವ ಯೋಜನೆಗಳನ್ನು ನಿಗದಿತ ನೀರಿನ ಹಂಚಿಕೆಯಂತೆ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಲಭ್ಯತೆ, ಕೆರೆ ತುಂಬಿಸುವ ಯೋಜನೆಗಳ ಪ್ರಗತಿ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ, ಜಲಧಾರೆ ಯೋಜನೆಯ ತಾಂತ್ರಿಕ ಸಮಸ್ಯೆಗಳು ಹಾಗೂ ಬರ ನಿರ್ವಹಣೆಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು ಜಿಲ್ಲಾಧಿಕಾರಿ ಡಾ. ಆನಂದ ಕೆ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಸಿದ್ದಾಮಪ್ಪ ಹೊನಮೋಡೆ, ಕೆಡಿಪಿ ನಾಮನಿರ್ದೇಶಿತ ಸದಸ್ಯರಾದ ಶಿವಣ್ಣ ಪಿ. ಕೋಟಾರಗಸ್ತಿ, ನೂರಅಹ್ಮದ ಅತ್ತಾರ, ಸತೀಶಕುಮಾರ ಅಡವಿ ಹಾಗೂ ಶ್ರೀಮತಿ ಪ್ರಿಯಾಂಕ ಚೇತನ ತೊರವಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಪ್ರಕಾಶ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



"ಅರಣ್ಯ ಇಲಾಖೆಯ ಕೆಲವು ಕಾರ್ಯಗಳಿಂದ ಕುಡಿಯುವನೀರಿನಪೂರೈಕೆಗೆ ತೊಂದರೆ ಯಾಗದಂತೆ ಕ್ರಮವಹಿಸಬೇಕು. ನಗರ ಪ್ರದೇಶಗಳಲ್ಲಿ ನೀರು ಪೂರೈಕೆಯ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಬೇಕು. ಜಲಧಾರೆ ಯೋಜನೆ ನಿಗದಿತ ಅವಧಿಯಲ್ಲಿ ಪೂರ್ಣಗೊಂಡರೆ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ."

■ ಶಿವಾನಂದ ಪಾಟೀಲ

ಬಸವನಬಾಗೇವಾಡಿ ಶಾಸಕರು



"ಲಭ್ಯವಿರುವ ನೀರನ್ನು ವ್ಯರ್ಥವಾಗದಂತೆ ಸಮರ್ಪಕವಾಗಿ ಬಳಸಿಕೊಳ್ಳಬೇಕು. ಎಲ್ಲರಿಗೂ ಸಮಾನವಾಗಿ, ಕೊನೆಯ ಅಂಚಿನವರೆಗೂ ನೀರು ತಲುಪಿಸಬೇಕು. ನೀರಿನ ಹಂಚಿಕೆ ಹಾಗೂ ನಿರ್ವಹಣೆಯಲ್ಲಿ ಅಧಿಕಾಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಇಂಡಿ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಅಗತ್ಯಕ್ಕೆ ಆದ್ಯತೆ ನೀಡಬೇಕು."

■ ಯಶವಂತರಾಯಗೌಡ ಪಾಟೀಲ

ಶಾಸಕರು, ಇಂಡಿ



" ಕೆರೆ ತುಂಬಿಸುವ ಸಂದರ್ಭದಲ್ಲಿ ಅಧಿಕಾರಿಗಳು ವಿಶೇಷ ನಿಗಾ ವಹಿಸಬೇಕು. ಸಂಬಂಧಿಸಿದ ಇಲಾಖೆಗಳ ಸಮನ್ವಯದೊಂದಿಗೆ ಕೆರೆಗಳಿಗೆ ನೀರು ಹರಿಸಬೇಕು ನಾರಾಯಣಪುರ ಜಲಾಶಯ ಆಧಾರಿತ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಸಮರ್ಪಕವಾಗಿ ನೀರು ಪೂರೈಸಲು ಕ್ರಮವಹಿಸಬೇಕು."

■ ಸಿ.ಎಸ್. ನಾಡಗೌಡ

ಶಾಸಕರು, ಮುದ್ದೇಬಿಹಾಳ



"ಐಸಿಸಿ ಸಭೆಯಲ್ಲಿ ನಿಗದಿಪಡಿಸಿದಂತೆ ಕೆರೆ ತುಂಬಿಸುವ ಯೋಜನೆಗಳಿಗೆ ಸಮರ್ಪಕವಾಗಿ ಬಳಸಿಕೊಳ್ಳಬೇಕು. ನಿಗದಿತ ಪ್ರಮಾಣದ ನೀರು ಸದ್ಬಳಕೆಯಾಗುವಂತೆ ಅಧಿಕಾರಿಗಳು ಕ್ರಮವಹಿಸಬೇಕು."

■ ಅಶೋಕ ಮನಗೂಳಿ

ಸಿಂದಗಿ ಶಾಸಕರು

ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ವಿವರಣೆ

ಒಟ್ಟು 115 ಪ್ರಕರಣಗಳ ವಿಚಾರಣೆ; 80 ಇತ್ಯರ್ಥ



ವಿಜಯಪುರ: ಜಿಲ್ಲೆಯಲ್ಲಿ ತಾವು ಕೈಗೊಂಡ ಮೂರು ದಿನಗಳ ಪ್ರವಾಸದ ಸಂದರ್ಭದಲ್ಲಿ ಎರಡು ದಿನಗಳಲ್ಲಿ ಒಟ್ಟು 115 ಪ್ರಕರಣಗಳ ವಿಚಾರಣೆ ನಡೆಸಿ, 80 ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲಾಗಿದೆ ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ತಿಳಿಸಿದರು.

ನಗರದ ಹೊಸ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನವೆಂಬರ್ 19 ಮತ್ತು 20ರಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಬಾಕಿಯಿದ್ದ 115 ಪ್ರಕರಣಗಳ ವಿಚಾರಣೆ ನಡೆಸಲಾಗಿದೆ. ಈ ಪೈಕಿ 80 ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲಾಗಿದ್ದು, ಉಳಿದ 35 ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಅರ್ಜಿದಾರರ ದೂರುಗಳನ್ನು ಕಾನೂನಿನನ್ವಯ ಶೀಘ್ರವಾಗಿ ಪರಿಶೀಲಿಸಿ, ಅರ್ಜಿಗಳನ್ನು ವಿಲೇವಾರಿ ಮಾಡಿ ಲೋಕಾಯುಕ್ತ ಕೇಂದ್ರ ಕಚೇರಿಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದರು.

ಸರ್ಕಾರಿ ಕಚೇರಿಗಳಿಗೆ ಬರುವ ಸಾರ್ವಜನಿಕರ ಕೆಲಸಗಳನ್ನು ನಿಗದಿತ ಕಾಲಮಿತಿಯೊಳಗೆ ನಿರ್ವಹಿಸಬೇಕು ನಿಗದಿತ ಅವಧಿಯಲ್ಲಿ ಸಾರ್ವಜನಿಕರ ಕೆಲಸಗಳನ್ನು ಮಾಡಿಕೊಡದಿದ್ದಲ್ಲಿ, ನಿಖರ ಹಾಗೂ ಸ್ಪಷ್ಟತೆಯಿಂದ ಪೂರಕ ದಾಖಲೆಗಳೊಂದಿಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ಸಲ್ಲಿಸಬಹುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಮಹಾನಿಂಗರಾಯ ನಂದಗಾವಿ, ಉಪ ಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಕಿರಣ್ ಪಾಟೀಲ,ಸಿಪಿಐ ಆನಂದ ಟಕ್ಕಣ್ಣವರ ಸೇರಿದಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು

ರವಿ ಹಂಜ ವಿರುದ್ಧ ಬಸವದಳ ಆಕ್ರೋಶ :ಕಾನೂನು ಕ್ರಮಕ್ಕೆ ಒತ್ತಾಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ರಾಷ್ಟ್ರೀಯ ಬಸವ ದಳ ವಿಜಯಪುರ ವತಿಯಿಂದ ನಗರದ ಬಸವೇಶ್ವರ ವೃತ್ತದ ಹತ್ತಿರ ರವಿ ಹಂಜ ಅವರ ಪ್ರತಿ ಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿ, ರವಿ ಹಂಜ ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಅವರನ್ನು ಬಂಧಿಸುವಂತೆ ಮತ್ತು ಬಸವ ಮಂಟಪ ಕೃತಿಯನ್ನು ಮುಟ್ಟುಗೋಲು ಹಾಕುವ ಕುರಿತು ಜಿಲ್ಲಾ ಆಡಳಿತದಿಂದ ಸನ್ಮಾನ್ಯ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಸಂಗನಬಸವ ಸ್ವಾಮೀಜಿ ಪಿ.ಬಿ.ಹುಣಚ್ಯಾಳ ಮಠ ಅವರು ಮಾತನಾಡಿ, ಸಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರನ್ನು ಹಾಗೂ ಅಂಗಾಯತರನ್ನು ಅವಹೇಳನ ಮಾಡಿದ ಲೇಖಕ ರವಿ ಹಂಜ ಬಸವ ಭಕ್ತರ ಹಾಗೂ ಲಿಂಗಾಯತ ಸಮುದಾಯದವರ ಮನಸ್ಸಿಗೆ ತೀವ್ರ ಘಾಸಿ ಮಾಡಿರುತ್ತಾರೆ. ಇಡೀ ಲಿಂಗಾಯತ ಸಮುದಾಯಕ್ಕೆ ಮತ್ತು ವಿಶ್ವಗುರು ಬಸವಣ್ಣನವರ ಅನುಯಾಯಿಗಳ ಮನಸ್ಸಿಗೆ ನೋವುಂಟು ಮಾಡುವಂತೆ ಆಧಾರ ರಹಿತ ಆರೋಪ ಮಾಡಿರುವ ರವಿ ಹಂಜಿ ಅವರ ಕೃತಿ ಮತ್ತು ಮಾತುಗಳು ಸಮಾಜದ ಸ್ವಾಸ್ಥ್ಯ ಕದಡುವಂತಿವೆ ಎಂದರು.

ರಾಷ್ಟ್ರೀಯ ಬಸವದಳ ಜಿಲ್ಲಾ ಅಧ್ಯಕ್ಷ ಮಲ್ಲಿಕಾರ್ಜುನ ಹಳ್ಳಿ ಮಾತನಾಡಿ, ಬಸವ ಮಂಟಪ ಕೃತಿಯನ್ನು ರಾಜ್ಯ ಸರ್ಕಾರವು ತಕ್ಷಣವೇ ಮುಟ್ಟುಗೋಲು ಹಾಕಿಕೊಳ್ಳುವುದೇ ಸೂಕ್ತ ಎಂಬುದು ರಾಷ್ಟ್ರೀಯ ಬಸವದಳ ಅಭಿಪ್ರಾಯವಾಗಿದೆ. ಸಂವಿಧಾನದ ದತ್ತವಾದ ವಾಕ್ ಸ್ವಾತಂತ್ರ ಮತ್ತು ಅಭಿವ್ಯಕ್ತಿ ಸ್ವಾತಂತ್ರಕ್ಕೆ ರಾಷ್ಟ್ರೀಯ ಬಸವದಳ ಗೌರವ ನೀಡುತ್ತದೆ. ಆದರೆಬಸವಣ್ಣನವರಕುರಿತುಅವಹೇಳನಕಾರಿಯಾಗಿ ಮಾತನಾಡುವವರನ್ನು ಅಂತಹ ಬರಹವನ್ನು ರಾಷ್ಟ್ರೀಯ ಬಸವದಳ ಒಪ್ಪಲು ಸಾಧ್ಯವೇ ಇಲ್ಲ. ಕೂಡಲೇ ರವಿ ಹಂಜಿಯವರ ಎಲ್ಲ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಿಂದ ತೆಗೆದುಹಾಕಬೇಕು.

ಸ್ವಯಂ ಪ್ರೇರಿತ ಪ್ರಕರಣವನ್ನು ದಾಖಲಿಸಿ ಕಾನೂನು ರೀತಿಯ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.



ಈ ಸಂದರ್ಭದಲ್ಲಿ ರಾಜ್ಯ ಗೌರವ ಅಧ್ಯಕ್ಷ ಬಸವರಾಜ ಕೊಂಡಗೂಳಿ, ಕಾರ್ಯಾಧ್ಯಕ್ಷ ಅಣ್ಣಾಸ್ವಾಮಿಗೂಳ ಪಾಟೀಲ, ಚೈತನಕುಮಾರ ಗಲಗಲಿ, ಬಾಬು ಇಬ್ರಾಹಿಂಪುರ, ಸಂತೋಷ ಬೇನೂರ, ಚೆನ್ನು ಕೊಂಡಗೂಳಿ, ರಾಹುತ ಮಲಜಿ, ಬಸವರಾಜ ಮೇಟಗಾರ, ಪರಶುರಾಮ ಬೊಮ್ಮನಹಳ್ಳಿ, ಪ್ರಭಾವತಿ ಹಳ್ಳಿ, ಮಹಾಂತೇಶ ಅಗಸರ, ಸಂಪತಕುಮಾರ ಇಂಗಳೇಶ್ವರ, ರಮೇಶ ಅಲ್ಲಿಭಾವಿ, ಚೆನಪ್ಪ ಗಂದಗಲ್ಲ, ರಾಜಪ್ಪ ಹಳ್ಳಿ, ಬಸವ ಕಿರಣ ಕೊಂಡಗೂಳಿ, ದೀಪಾ ಕೊಂಡಗೂಳಿ, ಎಂ ಜಿ ತಳವಾರ್, ಗಿರಿಜಾ ಚೌದರಿ, ಬಸವರಾಜ್ ಅಗಸರ, ರೇವತಿ ಬಿರಾದಾರ, ಯುವರಾಜ ಚೋಳಕೆ, ಬಿ ಎಸ್ ಬಿರಾದಾರ, ಕಮಲಾ ಚೌದರಿ, ಸಾವಿತ್ರಿ ಉಮದಿ, ಡಿ ಎ ಪಾಟೀಲ, ಪಿ ಎಂ ಹಳ್ಳಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಬೆಳಗಾವಿ ಜಿಲ್ಲಾ ಘಟಕ ಮತ್ತು ಲಿಂಗಾಯತ ಸಂಘಟನೆ ಮುಖಂಡರಿಂದ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ

ರವಿ ಹಂಜ ಮತ್ತು ಪ್ರಕಾಶಕರ ವಿರುದ್ಧ ಕಠಿಣ ಕ್ರಮಕ್ಕೆ ಮನವಿ

■ ಉದಯರಶ್ಮಿ ದಿನಪತ್ರಿಕೆ

ಬೆಳಗಾವಿ: ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಮತ್ತು ಲಿಂಗಾಯತ ಸಂಘಟನೆ ಬೆಳಗಾವಿ ಇವರ ಸಂಯುಕ್ತ ಸಂಘಟನೆಯಲ್ಲಿ ಬಸವ ಮಂಟಪ ಕೃತಿಯ ವಿವಾದಿತ ಲೇಖಕ ರವಿ ಹಂಜ ಮತ್ತು ಪ್ರಕಾಶಕ ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಅವರ ವಿರುದ್ಧ ಅತ್ಯಂತ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬಸವ ಪರ ಸಂಘಟನೆಗಳ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಬೆಳಗಾವಿ ಜಿಲ್ಲಾ ಘಟಕ ಮತ್ತು ಲಿಂಗಾಯತ ಸಂಘಟನೆ ಬೆಳಗಾವಿ ಮುಖಂಡರು ಬೆಳಗಾವಿ ಜಿಲ್ಲಾಧಿಕಾರಿ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಇಂತಹ ದೊಡ್ಡ ಕ್ರಿಮಿನಲ್ ಲೇಖಕನನ್ನು ಕರ್ನಾಟಕ ಸರ್ಕಾರ ಆತನ ಪಾಸ್ ಪೋರ್ಟ್ ಜಪ್ತಿ ಮಾಡಿ ಅಮೆರಿಕಾದ ವಿದೇಶಾಂಗ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದು ಅಲ್ಲಿನ ಪೌರತ್ವವನ್ನು ರದ್ದುಗೊಳಿಸಲು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳಿಗೆ ಎರಡೂ ಸಂಘಟನೆಯ ಮುಖಂಡರು ಮನವಿಯನ್ನು ಸಲ್ಲಿಸಿ ಪ್ರಕರಣವನ್ನು ದಾಖಲು ಮಾಡಿದ್ದಾರೆ.

ಡಾ ಶಶಿಕಾಂತ ಪಟ್ಟಣ, ಈರಣ್ಣ ದಯಣ್ಣವರ, ನ್ಯಾಯವಾದಿ ಸುನಿಲ್ ಸಾಣಿಕೊಪ್ಪ, ಶಶಿಭೂಷಣ



ಪಾಟೀಲ, ಸುಧಾ ಪಾಟೀಲ, ಆಶಾಲತಾ ಸೊಗಲದ, ರತ್ನಕ್ಕ ಸಾಣಿಕೊಪ್ಪ, ಸಂಗಮೇಶ ಅರಳಿ, ಸುರೇಶ್ ನರಗುಂದ, ರಮೇಶ್ ಕಳಸನ್ನವರ, ಸದಾಶಿವ ದೇವರಮನಿ, ಶಂಕರ ಗುಡಸ, ನಾಗನಗೌಡರು, ಶ್ರೀರಂಗ ಜೋಶಿ ಮುಂತಾದ ಅನೇಕರು ಈ ಸಂದರ್ಭದಲ್ಲಿ ಹಾಜರಿದ್ದು ಜಿಲ್ಲಾಧಿಕಾರಿಗಳಿಗೆ ಮತ್ತು ಪೊಲೀಸ ಜಿಲ್ಲಾ ವರಿಷ್ಠಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಉದ್ವಿಗ್ನ ಪರಿಸ್ಥಿತಿಯ ಸೂಕ್ಷ್ಮತೆಯನ್ನು ವಿವರಿಸಿದರು.

ವಿಜಯಪುರದಲ್ಲೂ ದೂರು ದಾಖಲು



ವಿಜಯಪುರ: ಬಸವ ಮಂಟಪ ಕೃತಿಯ ವಿವಾದಿತ ಲೇಖಕ ರವಿ ಹಂಜ ಮತ್ತು ಪ್ರಕಾಶಕ ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬಸವ ಪರ ಸಂಘಟನೆಗಳ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ, ವಿಜಯಪುರ ಜಿಲ್ಲಾ ಘಟಕ ಮತ್ತು ಬಸವಪರ ಸಂಘಟನೆಗಳ ಜೊತೆಗೂಡಿ, ಶನಿವಾರ ರಾಜ್ಯದ ಮುಖ್ಯಮಂತ್ರಿಗಳಿಗೆ ವಿಜಯಪುರ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿ ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಭೇಟಿಯಾಗಿ ಕ್ರಮಕ್ಕೆ ಒತ್ತಾಯಿಸಿ ದೂರು ಸಲ್ಲುಸಲಾಯಿತು.

ಈ ವೇಳೆ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎಸ್.ಬಿರಾದಾರ, ಪ್ರಧಾನ ಕಾರ್ಯದರ್ಶಿ ಡಾ.ಶಾರದಾಮಣಿ ಹುಣಶ್ಯಾಳ, ಮಹಿಳಾ ಗಟಕದ ಅಧ್ಯಕ್ಷೆ ರೇಖಾ ಬಿರಾದಾರ, ಕೋಶಾಧ್ಯಕ್ಷೆ ರತ್ನಾಬಾಯಿ ಬಿರಾದಾರ, ಉಪಾಧ್ಯಕ್ಷ ಸಿದ್ದಪ್ಪ ಪಡನಾಡ, ಸದಸ್ಯರಾದ ರೇವತಿ ಬಿರಾದಾರ ಸೇರಿದಂತೆ ರಾಷ್ಟ್ರೀಯ ಬಸವದಳದ ಪ್ರಮುಖರಿದ್ದರು.

ಮುತ್ತಿನ ಹನಿಗಳು ಸುತ್ತಲೂ ಮುತ್ತಲು..

■ ಉದಯರಶ್ಮಿ ದಿನಪತ್ರಿಕೆ

ನನ್ನ ಹೃದಯದ ಅರಸ ಸದಾಶಿವ,

ಮಳೆಗಾಲದ ಈ ಸಂಜೆಯಲ್ಲಿ, ಕಿಟಕಿಯ ಗಾಜಿನ ಮೇಲೆ ಜಾರುತ್ತಿರುವ ಮಳೆಯ ಹನಿಗಳನ್ನು ನೋಡುತ್ತಿದ್ದಂತೆ ನನ್ನ ಮನಸ್ಸು ನಮ್ಮಿಬ್ಬರ ಸುಂದರ ನೆನಪುಗಳ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದೆ. ಪಕ್ಕದ ಮನೆಯ ಕಿಟಕಿಯಿಂದ ಶುರುವಾದ ನಮ್ಮಿಬ್ಬರ ಆ ಸಣ್ಣ ಪರಿಚಯ, ಇಂದು ನನ್ನ ಇಡೀ ಬದುಕನ್ನೇ ಆವರಿಸಿಕೊಂಡಿರುವ ಮಹಾಸಾಗರವಾಗಿ ಬೆಳೆದು ನಿಂತಿದೆ. ನನ್ನೊಳಗೆ ಅಡಗಿದ್ದ ಸಾವಿರಾರು ಭಾವನೆಗಳನ್ನು, ಆ ಮಳೆಯ ಸಂಜೆಯ ಮಧುರ ಕ್ಷಣಗಳನ್ನು ಇಂದು ಪದಗಳಲ್ಲಿ ಪೋಣಿಸಿ ನಿನ್ನ ಮುಂದಿಡುತ್ತಿದ್ದೇನೆ.

ನಮ್ಮಿಬ್ಬರ ಸ್ನೇಹ ಚಿಗುರೊಡೆದ ಆ ಟೆರೇಸ್ ಮೇಲಿನ ಸಂಜೆಗಳು ನನಗಿನ್ನೂ ಕಣ್ಣಿಗೆ ಕಟ್ಟಿದಂತಿವೆ. ಸಂಜೆಯ ತಂಪಾದ ಗಾಳಿಗೆ ಬಟ್ಟೆ ಒಣಗಿಸಲು ಅಥವಾ ಸುಮ್ಮನೆ ಆಕಾಶ ನೋಡಲು ನಾನು ಟೆರೇಸ್ ಮೇಲೆ ಬಂದಾಗಲೆಲ್ಲಾ, ಪಕ್ಕದ ಮನೆಯ ಗೋಡೆಯ ಆಚೆಯಿಂದ ನಿನ್ನ ಆ ಮುದ್ದಾದ ನಗು ನನ್ನನ್ನು ಸ್ವಾಗತಿಸುತ್ತಿತ್ತು. ಆ ದಿನಗಳಲ್ಲಿ ನಾನು ತಿಳಿ ನೀಲಿ ಬಣ್ಣದ ಜಾರ್ಜೆಟ್ ಸೀರೆಯುಟ್ಟು, ಅದಕ್ಕೆ ಹೊಂದುವಂತಹ ಆಧುನಿಕ ವಿನ್ಯಾಸದ ಸ್ಲೀವ್‌ಲೆಸ್ ಹಾಗೂ ಬೆನ್ನಿಗೆ ನಾಜೂಕಾದ ದಾರವಿರುವ ಟ್ರೆಂಡಿ ಬ್ಲೌಸ್ ತೊಟ್ಟು ನಿಂತಾಗ, ನಿನ್ನ ಕಣ್ಣುಗಳು ನನ್ನನ್ನೇ ದಿಟ್ಟಿಸುತ್ತಿದ್ದ ರೀತಿ ನನ್ನ ಕೆನ್ನೆಗಳಲ್ಲಿ ಸಂಜೆಯ ಕೆಂಪನ್ನು ಮೂಡಿಸುತ್ತಿತ್ತು. ನನ್ನ ಸೊಂಟದ ಬಳಿ ಜಾರುತ್ತಿದ್ದ ಸೀರೆಯ ಸೆರಗನ್ನು ಸರಿಪಡಿಸಿಕೊಳ್ಳುತ್ತಾ, ಗಾಳಿಯೊಂದಿಗೆ ತುಂಟಾಟವಾಡುತ್ತಾ ಕೆನ್ನೆಗೆ ಮುತ್ತಿಕ್ಕುತ್ತಿದ್ದ ಮುಂಗುರುಳನ್ನು ನಾಜೂಕಾದ ಬೆರಳುಗಳಿಂದ ನೇವರಿಸಿ ನಾನು ನಾಚಿಕೆಯಿಂದ ತಲೆತಗ್ಗಿಸಿದಾಗಲೆಲ್ಲಾ, ನಿನ್ನ ಕಣ್ಣುಗಳಲ್ಲಿ ಮೂಡುತ್ತಿದ್ದ ಆ ಮೆಚ್ಚುಗೆಯ ಹೊಳಪು ನನ್ನ ಎದೆಯಲ್ಲಿ ಮಲ್ಲಿಗೆಯ ಕಂಪನ್ನು ಪಸರಿಸುತ್ತಿತ್ತು.

ಟೆರೇಸ್‌ನ ಆ ಪುಟ್ಟ ಗೋಡೆಯೇ ನಮ್ಮಿಬ್ಬರ ನಡುವಿನ ಸೇತುವೆಯಾಗಿತ್ತು. ಬೆಳಗಿನ ಕಾಫಿ ಕಪ್ ಹಿಡಿದು ನಡೆಯುತ್ತಿದ್ದ ನಮ್ಮ ಮಾತುಗಳು, ಕತ್ತಲಾದರೂ ಮುಗಿಯದಷ್ಟು ಆಳವಾಗಿ



ಬೆಳೆಯುತ್ತಿದ್ದವು. ನನ್ನ ಪ್ರತಿ ಸಣ್ಣ ಕಷ್ಟಕ್ಕೂ ನೀನು ತೋರುತ್ತಿದ್ದ ಕಾಳಜಿ, ನನ್ನ ನಗುವಿಗಾಗಿ ನೀನು ಹೇಳುತ್ತಿದ್ದ ತಮಾಷೆಯ ಮಾತುಗಳು ನಮ್ಮ ನೆರೆಹೊರೆಯ ಪರಿಚಯವನ್ನು ಅತ್ಯಂತ ಆಪ್ತವಾದ ಗೆಳೆತನವನ್ನಾಗಿ ಬದಲಾಯಿಸಿದ್ದವು.

ನೀನು ಟೆರೇಸ್ ಮೇಲೆ ಬಂದು ನಿಂತಾಗಲೆಲ್ಲಾ, ನಿನ್ನ ಆ ಆಕರ್ಷಕ ನಿಲುವು ನನ್ನನ್ನು ಮಂತ್ರಮುಗ್ಧಳನ್ನಾಗಿಸುತ್ತಿತ್ತು. ಜಿಮ್‌ನಲ್ಲಿ ಕಸರತ್ತು ಮಾಡಿ ಹುರಿಗೊಳಿಸಿದ ನಿನ್ನ ದೃಢವಾದ ಮೈಕಟ್ಟು, ಅಗಲವಾದ ಭುಜಗಳು ಮತ್ತು ಗಂಭೀರವಾದ ನಡಿಗೆಯು ಶಿಲ್ಪಿಯೊಬ್ಬ ಕಡೆದ ಸುಂದರ ಕಲಾಕೃತಿಯಂತೆ ಕಾಣುತ್ತಿತ್ತು. ಕಡುಗಪ್ಪು ಬಣ್ಣದ ಫಿಟ್ ಟಿ-ಶರ್ಟ್ ಅಥವಾ ತೋಳು ಮಡಚಿದ ಬಿಳಿ ಶರ್ಟ್ ತೊಟ್ಟು ನೀನು ನಿಂತಾಗ, ನಿನ್ನ ಕೈಯಲ್ಲಿದ್ದ ಕಪ್ಪು ಬಣ್ಣದ ವಾಚ್ ಮತ್ತು ಹಣೆಯ ಮೇಲೆ ಬೀಳುತ್ತಿದ್ದ ಕೂದಲನ್ನು ನೀನು ಕೈಯಾಡಿಸಿ ಸರಿಪಡಿಸಿಕೊಳ್ಳುವ ಆ ಶೈಲಿ ನನ್ನೊಳಗೆ ಮಿಂಚಿನ ಸಂಚಾರವನ್ನುಂಟುಮಾಡುತ್ತಿತ್ತು. ನಿನ್ನ ಗಂಭೀರವಾದ ಧ್ವನಿಯು ಗುಡುಗಿನಂತೆ ಆಳವಾಗಿದ್ದರೂ, ನನ್ನೊಂದಿಗೆ ಮಾತನಾಡುವಾಗ ನಿನ್ನ ತುಟಿಗಳ ಮೇಲೆ ಮೂಡುತ್ತಿದ್ದ ಆ ಮಂದಹಾಸವು ಕಾರ್ಮೋಡವನ್ನು ಸೀಳಿ ಬಂದ ಸೂರ್ಯಕಿರಣದಂತೆ ನನ್ನೆಲ್ಲಾ ತಳಮಳವನ್ನು ದೂರ ಮಾಡುತ್ತಿತ್ತು.

ಕಳೆದ ವಾರ ನಾವಿಬ್ಬರೂ ನಗರದ ಗದ್ದಲದಿಂದ ದೂರವಿದ್ದ ಆ ಹಸಿರು ಬೆಟ್ಟದ ತಪ್ಪಲಿನ ಏಕಾಂತದ ತಾಣಕ್ಕೆ ಹೋಗಿದ್ದೆವು. ಸುತ್ತಲೂ ದಟ್ಟವಾದ ಮಂಜು ಆವರಿಸಿತ್ತು, ಪ್ರಕೃತಿಯೇ ನಮ್ಮಿಬ್ಬರ ಮಿಲನಕ್ಕೆ ವೇದಿಕೆ ಸಿದ್ಧಪಡಿಸಿದಂತೆ ಭಾಸವಾಗುತ್ತಿತ್ತು. ಇದ್ದಕ್ಕಿದ್ದಂತೆ ಆಕಾಶದಲ್ಲಿ ಕಪ್ಪು ಮೋಡಗಳು ಕವಿದು, ವರುಣನ ಆರ್ಭಟ ಶುರುವಾಯಿತು. ಮುತ್ತಿನಂತಹ ಮಳೆಯ ಹನಿಗಳು ನಮ್ಮಿಬ್ಬರನ್ನೂ ಸುತ್ತುವರಿದವು.

ಆ ಮಳೆಯ ತಂಪಿನಲ್ಲಿ ನಾನು ತೊಟ್ಟಿದ್ದ ತಿಳಿ ಗುಲಾಬಿ ಬಣ್ಣದ ರೇಷ್ಮೆ ಸೀರೆಯು ಸಂಪೂರ್ಣವಾಗಿ ನೆನೆದು, ನನ್ನ ದೇಹಕ್ಕೆ ಅಂಟಿ–ಕೊಂಡು ನನ್ನ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿತ್ತು. ಆಧುನಿಕ ವಿನ್ಯಾಸದ ನನ್ನ ಬ್ಲೌಸ್‌ನ ಅಂಚಿನಿಂದ ಜಾರುತ್ತಿದ್ದ ಮಳೆಯ ಹನಿಗಳು, ನನ್ನ ಬೆನ್ನಿನ ಮೇಲೆ ಮುತ್ತಿನ ಹಾರದಂತೆ ಹೊಳೆಯುತ್ತಿದ್ದವು. ಚಳಿಯಿಂದ ನಡುಗುತ್ತಿದ್ದ ನನ್ನನ್ನು ಕಂಡು ನೀನು ನನ್ನ ಸನಿಹಕ್ಕೆ ಬಂದೆ. ನಿನ್ನ ಬಲಿಷ್ಠವಾದ ತೋಳುಗಳಿಂದ ನನ್ನ ಸೊಂಟವನ್ನು ಬಳಸಿ ನಿನ್ನೆದೆಗೆ ಒತ್ತಿಕೊಂಡ ಆ ಕ್ಷಣ, ಮಳೆಯ ತಂಪಿನಲ್ಲೂ ನನ್ನ ಇಡೀ ದೇಹದಲ್ಲಿ ಬೆಚ್ಚಗಿನ ವಿದ್ಯುತ್ ಸಂಚರಿಸಿದಂತಾಯಿತು. ಅದು ಬಾಯಾರಿದ ಪಯಣಿಗನಿಗೆ ಅಮೃತ ಸಿಕ್ಕಂತಹ ದಿವ್ಯ ಅನುಭೂತಿ!

ನನ್ನ ಮುಖದ ಮೇಲೆ ಬಿದ್ದಿದ್ದ ನೆನೆದ ಮುಂಗುರುಳನ್ನು ನಿನ್ನ ಬೆರಳುಗಳಿಂದ ಮೃದುವಾಗಿ ಸರಿಸಿ, ನನ್ನ ಕಣ್ಣುಗಳ ಆಳವನ್ನೇ ದಿಟ್ಟಿಸಿದೆ. ನಿನ್ನ ಬಿಸಿಯುಸಿರು ನನ್ನ ಕೆನ್ನೆಯನ್ನು ಸೋಕಿದ ಆ ಅರೆಕ್ಷಣ, ಕಾಲವೇ ನಿಂತುಹೋದಂತಾಯಿತು. ನಾಚಿಕೆಯಿಂದ ಮುಚ್ಚಿದ ನನ್ನ ಕಣ್ರೆಪ್ಪೆಗಳ ಮೇಲೆ ನಿನ್ನ ತುಟಿಗಳ ಮೃದುವಾದ ಸ್ಪರ್ಶವಾದಾಗ, ನನ್ನೊಳಗೆ ನವಿರಾದ ಕಂಪನವೊಂದು ಹಾದುಹೋಯಿತು. ಸುತ್ತಲೂ ಸುರಿಯುತ್ತಿದ್ದ ಮುತ್ತಿನ ಹನಿಗಳ ಸದ್ದಿನ ನಡುವೆ, ಮಕರಂದವನ್ನು ಹೀರುವ ದುಂಬಿಯಂತೆ ನಿನ್ನ ಅಧರಗಳು ನನ್ನ ಗುಲಾಬಿ ದಳಗಳಂತಹ ಅಧರಗಳನ್ನು ಆವರಿಸಿಕೊಂಡ ಆ ಅಮೃತ ಘಳಿಗೆಯಲ್ಲಿ, ಭೂಮಿ–ಆಕಾಶಗಳೆರಡೂ ಒಂದಾದಂತೆ ಭಾಸವಾಗಿ ನನ್ನ ಇಡೀ ಅಸ್ತಿತ್ವವೇ ನಿನ್ನೊಲವಿನ ಕಡಲಲ್ಲಿ ಲೀನವಾಗಿಹೋಯಿತು.









ಜಯಶ್ರೀ ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ – ಮೊ:9449234142

ಮಳೆಯ ನೀರಿನೊಂದಿಗೆ ಬೆರೆತ ನಮ್ಮಿಬ್ಬರ ಆ ಮೊದಲ ಮುತ್ತು, ನನ್ನೊಳಗಿನ ಸಾವಿರ ವರ್ಷಗಳ ತಳಮಳವನ್ನು ಶಾಂತಗೊಳಿಸಿ, ನಿನ್ನ ತೋಳುಗಳ ಸುರಕ್ಷಿತ ಅಪ್ಪುಗೆಯಲ್ಲಿ ನನಗೆ ನಿಜವಾದ ನೆಮ್ಮದಿಯನ್ನು ನೀಡಿತ್ತು.ಅಂದಿನಿಂದ ನಿನ್ನನ್ನು ನೋಡದೆ ಒಂದು ಕ್ಷಣವೂ ಇರಲಾರದಷ್ಟು ನನ್ನ ಮನಸ್ಸು ನಿನ್ನನ್ನೇ ಹಂಬಲಿಸುತ್ತಿತ್ತು. ಮನೆಯವರ ಕಣ್ಣು ತಪ್ಪಿಸಿ, ಹೆಜ್ಜೆಯ ಸದ್ದಾಗದಂತೆ ಕಳ್ಳಹೆಜ್ಜೆ ಇಡುತ್ತಾ ಟೆರೇಸ್‌ನ ಆ ಸಣ್ಣ ಭೇಟಿಗಾಗಿ ಕಾಯುತ್ತಿದ್ದ ಆ ಕ್ಷಣಗಳು ಎಷ್ಟು ರೋಮಾಂಚಕವಾಗಿದ್ದವು ಅಲ್ಲವೇ? ಆದರೆ, ಕಳೆದ ಸಂಜೆ ಬೆಳದಿಂಗಳ ಬೆಳಕಿನಲ್ಲಿ ನಾವು ಕಣ್ಣಲ್ಲೇ ಸಂಭಾಷಿಸುತ್ತಾ ನಿಂತಿದ್ದಾಗ, ನಮ್ಮಿಬ್ಬರ ಈ ಸಿಹಿ ಗುಟ್ಟು ಅನಿರೀಕ್ಷಿತವಾಗಿ ಹಿರಿಯರ ಕಣ್ಣಿಗೆ ಬಿದ್ದೇಬಿಟ್ಟಿತು! ಆ ಕ್ಷಣ ನನ್ನ ಎದೆಬಡಿತ ನಿಂತುಹೋದಂತಾಗಿ ನಾಚಿಕೆ ಮತ್ತು ಭಯದಿಂದ ನಾನು ನೆಲವನ್ನೇ ದಿಟ್ಟಿಸುತ್ತಾ ನಿಂತಿದ್ದೆ. ಆದರೆ, ನಮ್ಮಿಬ್ಬರ ಪರಿಶುದ್ಧ ಪ್ರೀತಿ ಮತ್ತು ಪರಸ್ಪರ ಕಾಳಜಿಯನ್ನು ಅರಿತಿದ್ದ ಎರಡೂ ಮನೆಯ ಹಿರಿಯರು, ಕೋಪಗೊಳ್ಳುವ ಬದಲು ಮುಗುಳ್ನಗುತ್ತಾ ನಮ್ಮ ಒಲವಿಗೆ ಹಸಿರು ನಿಶಾನೆ ತೋರಿದರು! ಕಳ್ಳಭೇಟಿಯ ಆ ಸಿಹಿ ತಪ್ಪಿಗೆ ಶಿಕ್ಷೆಯಾಗಿ, ಇದೀಗ ಎರಡೂ ಕುಟುಂಬಗಳ ಸಮ್ಮುಖದಲ್ಲಿ ನಮ್ಮಿಬ್ಬರ ಮದುವೆ ನಿಶ್ಚಯವಾಗಿರುವುದು ನನ್ನ ಬದುಕಿನ ಅತ್ಯಂತ ದೊಡ್ಡ ಸಂಭ್ರಮವಾಗಿದೆ.

ಸದಾಶಿವ, ಪಕ್ಕದ ಮನೆಯ ಟೆರೇಸ್‌ನಿಂದ ಶುರುವಾದ ನಮ್ಮಿಬ್ಬರ ಈ ಪಯಣ, ಇಂದು ಸಪ್ತಪದಿಯ ಹೊಸ್ತಿಲಿಗೆ ಬಂದು ನಿಂತಿದೆ. ಮಳೆಯ ಹನಿಯಂತೆ ನಿರ್ಮಲವಾದ ನಿನ್ನ ಪ್ರೀತಿಯ ನೆರಳಿನಲ್ಲಿ ನನ್ನ ಇಡೀ ಬದುಕನ್ನು ಕಳೆಯಲು ನಾನು ಸಿದ್ಧಳಾಗಿದ್ದೇನೆ. ನಿನ್ನ ಕೈ ಹಿಡಿದು ಬದುಕಿನ ಪ್ರತಿ ಹೆಜ್ಜೆಯಲ್ಲೂ ನಿನ್ನೊಡತಿಯಾಗಿ ಸಾಗಲು ನಾನು ಕಾತರದಿಂದ ಕಾಯುತ್ತಿದ್ದೇನೆ.

ನಿನ್ನೊಲವಿನ ಸಖಿ, ಸರಸು.

ಪ್ರಕೃತಿ ಚಿಕಿತ್ಸೆ ಸಮಗ್ರ ದೃಷ್ಟಿಕೋನ, ಆರೋಗ್ಯ ಪದ್ಧತಿ



ಕಲಬುರಗಿ : ಪ್ರಕೃತಿ ಚಿಕಿತ್ಸೆಯು ಕೇವಲ ದೈಹಿಕ ರೋಗವನ್ನಲ್ಲದೆ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಒಟ್ಟಿಗೆ ಸುಧಾ–ರಿಸುವ ಸಮಗ್ರ ದೃಷ್ಟಿಕೋನ ಹಾಗೂ ಆರೋಗ್ಯಕರ ಪದ್ಧತಿಯಾಗಿದೆ. ಕೃತಕ ಔಷಧಗಳು ಅಥವಾ ಶಸ್ತ್ರಕ್ರಿಯೆಗಳಿಲ್ಲದೆ, ದೇಹದ ಸ್ವಯಂ ಗುಣಪಡಿಸುವ ಶಕ್ತಿ ಮತ್ತು ಪ್ರಕೃತಿಯ ಐದು ಮೂಲಭೂತ ಅಂಶಗಳಾದ ಭೂಮಿ, ನೀರು, ಗಾಳಿ, ಬೆಂಕಿ ಮತ್ತು ಆಕಾಶ ಇವುಗಳನ್ನು ಬಳಸಿ ರೋಗಗಳನ್ನು ನಿವಾರಿಸುವ ಹಾಗೂ ಆರೋಗ್ಯವನ್ನು ಕಾಪಾಡುವ ಸಮಗ್ರ ಚಿಕಿತ್ಸಾ ಪದ್ಧತಿಯಾಗಿದೆ ಎಂದು ಪ್ರಕೃತಿ ಚಿಕಿತ್ಸೆ ತಜ್ಞ ವೈದ್ಯ ಹಾಗೂ ರಾಷ್ಟ್ರೀಯ ಸಮಗ್ರ ವೈದ್ಯಕೀಯ ಸಂಘದ ಜಿಲ್ಲಾಧ್ಯಕ್ಷ ಡಾ.ಪ್ರಮೋದ ಗುಂಡಗುರ್ತಿ ಹೇಳಿದರು. ನಗರದ ಶಹಾಬಜಾರ ಮಹಾದೇವ ನಗರದಲ್ಲಿನ 'ಸ್ವಾತಿ ಪ್ರೌಢಶಾಲೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಬುಧವಾರ ಏರ್ಪಡಿಸಿದ್ದ "ರಾಷ್ಟ್ರೀಯ ಪ್ರಕೃತಿ ಚಿಕಿತ್ಸೆ ದಿನಾಚರಣೆ"ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಇದು ಕೇವಲ ರೋಗಕ್ಕೆ ಚಿಕಿತ್ಸೆ ನೀಡುವುದಲ್ಲದೆ, ಇದೊಂದು ಉತ್ತಮ ಜೀವನಶೈಲಿಯಾಗಿದೆ. ಪ್ರಕೃತಿ ಚಿಕಿತ್ಸೆಯು ಮಾನವನ ದೇಹದಲ್ಲಿರುವ ಸಹಜ ರೋಗನಿರೋಧಕ ಮತ್ತು ಸ್ವಯಂ–ಗುಣಪಡಿಸುವ ಸಾಮರ್ಥ್ಯವನ್ನು ಉತ್ತೇಜಿಸುತ್ತದೆ. ಇದರಲ್ಲಿ ಕೃತಕ ರಾಸಾಯನಿಕಯುಕ್ತ ಔಷಧಿಗಳನ್ನು ಬಳಸುವುದಿಲ್ಲವಾದ್ದರಿಂದ ಯಾವುದೇ ಅಡ್ಡಪ–ರಿಣಾಮಗಳಿರುವುದಿಲ್ಲ.

ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಬೊಜ್ಜು ಮತ್ತು ಕೀಲುನೋವಿನಂತಹ ದೀರ್ಘಕಾಲದ ಕಾಯಿಲೆಗಳನ್ನು ಪರಿಣಾಮಕಾ–ರಿಯಾಗಿ ನಿರ್ವಹಿಸಲು ಇದು ಸಹಕಾರಿಯಾಗಿದೆ. "ಆಹಾರವೇ ಔಷಧ" ಎಂಬ ತತ್ವದ ಮೇಲೆ ಇದು ಕೆಲಸ ಮಾಡುತ್ತದೆ ಎಂದರು. ಸರಿಯಾದ ಪೌಷಕಾಂಶಯುಕ್ತಆಹಾರ,ಉಪವಾಸಮತ್ತುದೇಹದ ಶುದ್ಧೀಕರಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ಇದು ಕಡಿಮೆ ವೆಚ್ಚದ ಹಾಗೂ ಜನಸಾಮಾನ್ಯ–ರಿಗೂ ಸುಲಭವಾಗಿ ಅಳವಡಿಸಿಕೊಳ್ಳಬಹುದಾದ ಆರೋಗ್ಯ ಪದ್ಧತಿಯಾಗಿದೆ. ಗಿಡ–ಮೂಲಿಕೆಗಳಲ್ಲಿ ಸರ್ವ ಕಾಯಿಲೆಗಳಲ್ಲಿ ಮದ್ದಿದೆ ಎಂದರು. ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರಾವಿಪ ಗ್ರಾಮೀಣ ಘಟಕದ ಮಾಜಿ ಸಂಚಾಲಕ ಶಿವಯೋಗೆಪ್ಪಾ ಎಸ್.ಬಿರಾದಾರ, ಶಾಲೆಯ ಮುಖ್ಯ ಶಿಕ್ಷಕಿ ಸಾಲಿ ಸಂಗೀತಾ, ಶಿಕ್ಷಕಿ ಕಾಶಮ್ಮ ಚಿನಮಳ್ಳಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಂದಕುಮಾರ ಮಾಲಿಪಾಟೀಲಗೆ ಸನ್ಮಾನ



ಕಲಬುರಗಿ: ಕರ್ನಾಟಕ ರಾಜ್ಯ ಸರಕಾರದಿಂದ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತರಾದ ನಂದಕುಮಾರ ಮಾಲಿಪಾಟೀಲ ಅವರನ್ನು ನಗರದ ಕನ್ನಡಭವನದಲ್ಲಿಂದು ಕಲ್ಯಾಣ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕರ ಸಂಘ ಜಿಲ್ಲಾ ಸಮಿತಿ ಮತ್ತು ಕರ್ನಾಟಕ ರಾಜ್ಯ ಪ.ಪಂ.ಸ ನೌಕರರ ಸಂಘ ಜಿಲ್ಲಾ ಸಮಿತಿಯಿಂದ ಅಭಿನಂದಿಸಲಾಯಿತು. ಡಾ.ವಾಲ್ಮೀಕಿ ಪ್ರಸನ್ನಾನಂದಪುರಿ ಮಹಾಸ್ವಾಮಿಗಳು,ಶ್ರವಣ–ಕುಮಾರ ನಾಯಕ,ಜಗದೀಶ್ವರಮೂರ್ತಿ ವೈಪಿ,ಶ್ರೀಧರ ರತ್ನಾಗಿರಿ,ಮಾರೆಪ್ಪ ನಾಯಕ ಮಗ್ದಂಪುರ,ಮಾನಪ್ಪ ನಾಯಕ,ಮಲ್ಲಿನಾಥ–,ಡಾ.ರಾಮುನಾಯಕ ಅರಳಹಳ್ಳಿ,ಮಾರುತಿ ಜಮಾದಾರ,ಶರಣು ಸುಬೇದಾರ,ಚನ್ನಬಸಪ್ಪ ಮೇಕಾಲೆ,ಲಕ್ಷ್ಮಣ ಭೋಸ್ಲೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವೆಂಗ್ಸರ್ಕರ್ ಕ್ರಿಕೆಟ್ ಅಕಾಡೆಮಿಗೆ ಭರ್ಜರಿ ಜಯ



ಕಲಬುರಗಿ: ಕೆಬಿಎನ್ ಗೋಲ್ಡಕಪ್–26 ಪಂದ್ಯವಳಿಯಲ್ಲಿ ವೆಂಗ್ಸರ್ಕರ್ ಕ್ರಿಕೆಟ್ ಅಕಾಡೆಮಿ ತಂಡವು ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡೂ ವಿಭಾಗಗಳಲ್ಲಿ ಅದ್ಭುತ ಪ್ರದರ್ಶನ ನೀಡುವ ಮೂಲಕ ನೆಕ್ಟ್ ಜೆನ್ ಕ್ರಿಕೆಟ್ ಅಕಾಡೆಮಿ ವಿರುದ್ಧ 9 ವಿಕೆಟ್ಗಳ ಭರ್ಜರಿ ಜಯ ಸಾಧಿಸಿದೆ.

40 ಓವರ್ಗಳ ಪಂದ್ಯದಲ್ಲಿ ಆರ್ಯ ಕುಮಾವತ್ ಅವರ ಅಮೋಘ 6 ವಿಕೆಟ್ಗಳ ಸಾಧನೆ ಹಾಗೂ ನಾಯಕ ಅರುಣೋದಯ್ ಸಿಂಗ್ ಮತ್ತು ಅರುಷ್ ಅಶುತೋಷ್ ಮಾಳವಾಡೆ ಅವರ ಸ್ಫೋಟಕ ಅರ್ಧಶತಕಗಳ ನೆರವಿನಿಂದ ವೆಂಗ್ಸರ್ಕರ್ ಕ್ರಿಕೆಟ್ ಅಕಾಡೆಮಿ ಕೇವಲ 12.4 ಓವರ್ಗಳಲ್ಲಿ 160 ರನ್ಗಳ ಗುರಿಯನ್ನು ಯಶಸ್ವಿಯಾಗಿ ತಲುಪಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನೆಕ್ಟ್ ಜೆನ್ ಕ್ರಿಕೆಟ್ ಅಕಾಡೆಮಿ ತಂಡ ಉತ್ತಮ ಆರಂಭ ಪಡೆದರೂ, ವೆಂಗ್ಸರ್ಕರ್ ತಂಡದ ಶಿಸ್ತುಬದ್ಧ ಬೌಲಿಂಗ್ ದಾಳಿಗೆ ತತ್ತರಿಸಿತು.

ತಂಡದ ನಾಯಕ ಸಾಯಿ ಚರಣ್ ಕೋಟಾ 42 ಎಸೆತಗಳಲ್ಲಿ 38 ರನ್ ಗಳಿಸಿ ಎಂಟು ಬೌಂಡರಿಗಳನ್ನು ಬಾರಿಸಿದರೆ, ಭದ್ರಿ ಅಮರನಾಥ್ ರೆಡ್ಡಿ 28 ಎಸೆತಗಳಲ್ಲಿ 32 ರನ್ ಗಳಿಸಿ ತಂಡಕ್ಕೆ ಉತ್ತಮ ಕೊಡುಗೆ ನೀಡಿದರು.

ಆದರೆ ಮಧ್ಯಮ ಕ್ರಮಾಂಕದ ಬ್ಯಾಟ್ಸ್ಮನ್ಗಳನ್ನು ಆರ್ಯ ಕುಮಾವತ್ ತಮ್ಮ ಮಾರಕ ಬೌಲಿಂಗ್ ಮೂಲಕ ಪೆವಿಲಿಯನ್ಗೆ ಕಳುಹಿಸಿದರು. ಅವರು 10 ಓವರ್ಗಳಲ್ಲಿ ಕೇವಲ 28 ರನ್ ನೀಡಿ 6 ವಿಕೆಟ್ ಕಬಳಿಸಿದರು. ಇದರಲ್ಲಿ ಮೂರು ಮೇಡನ್ ಓವರ್ಗಳೂ ಸೇರಿವೆ.

ಸಮರ್ಥ್ ರೋಂಗೆ 2 ವಿಕೆಟ್ ಹಾಗೂ ಪ್ರಜ್ಯೋತ್ ಗುಂಡಲೆ 1 ವಿಕೆಟ್ ಪಡೆದು ಉತ್ತಮ ಬೆಂಬಲ ನೀಡಿದರು.

ಗುಗುಲೋತು ಅಭಿ 18 ರನ್ ಹಾಗೂ ಶ್ರೀಹಾನ್ ರಾವ್ ಅಜೇಯ 15 ರನ್ ಗಳಿಸಿ ಕೊನೆಯ ಹಂತದಲ್ಲಿ ಹೋರಾಟ ನಡೆಸಿದರೂ, ನೆಕ್ಟ್ ಜೆನ್ ತಂಡವು 40ನೇ ಓವರ್ನ ಕೊನೆಯ ಎಸೆತದಲ್ಲಿ 159 ರನ್ಗಳಿಗೆ ಆಲೌಟ್ ಆಯಿತು.159 ರನ್ಗಳ ಗುರಿಯನ್ನು ಬೆನ್ನಟ್ಟಿದ ವೆಂಗ್ಸರ್ಕರ್ ಕ್ರಿಕೆಟ್ ಅಕಾಡೆಮಿ ತಂಡವು ಆರಂಭದಿಂದಲೇ ಆಕ್ರಮಣ–ಕಾರಿ ಆಟ ಪ್ರದರ್ಶಿಸಿತು.

ಆರಂಭಿಕ ಆಟಗಾರರಾದ ಅರುಷ್ ಅಶುತೋಷ್ ಮಾಳವಾಡೆ ಮತ್ತು ನಾಯಕ ಅರುಣೋದಯ್ ಸಿಂಗ್ ಎದುರಾಳಿ ಬೌಲರ್ಗಳ ಮೇಲೆ ಸವಾರಿ ಮಾಡಿ ಕೇವಲ 7.3 ಓವರ್ಗಳಲ್ಲಿ 121 ರನ್ಗಳ ಭರ್ಜರಿ ಆರಂಭಿಕ ಜೊತೆಯಾಟ ನೀಡಿದರು.

ಅರುಷ್ ಅಶುತೋಷ್ ಮಾಳವಾಡೆ ಕೇವಲ 26 ಎಸೆತಗಳಲ್ಲಿ 11 ಬೌಂಡರಿ ಮತ್ತು 2 ಸಿಕ್ಸರ್ಗಳ ನೆರವಿನಿಂದ ಸ್ಫೋಟಕ 63 ರನ್ ಗಳಿಸಿದರು. ಸಾಯಿ ಚರಣ್ ಕೋಟಾ ಅವರ ಬೌಲಿಂಗ್ನಲ್ಲಿ ವಿಕೆಟ್ ಒಪ್ಪಿಸುವ ಮೂಲಕ ಅವರು ಔಟಾದರು.

ಆದರೆ ನಾಯಕ ಅರುಣೋದಯ್ ಸಿಂಗ್ ಕೇವಲ 41

ಹರಸೂರ್ ಇನಟೇಕ್ ವೆಲ್ ಕಾರ್ಯ ಮುಗಿಸಲು ಎಲ್ & ಟಿಗೆ ಗಡುವು ನೀಡಿದ ಡಿ.ಸಿ.ಇಕ್ರಂ ಶರೀಫ್



ಕಲಬುರಗಿ:ಭೀಕರ ಬರಗಾಲದಿಂದ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಮುಂದಿನ ಬೇಸಿಗೆಯಲ್ಲಿ ಇದರ ಸಮಸ್ಯೆ ಇನ್ನು ಹೆಚ್ಚಾಗುವ ಸಾಧ್ಯತೆ ಇದ್ದು, ಫೆಬ್ರವರಿ ಅಂತ್ಯಕ್ಕೆ ಬೆಣ್ಣೆತೋರಾ ಜಲಾಶಯದಿಂದ ಕಲಬುರಗಿ ನಗರಕ್ಕೆ ನೀರು ಪಡೆಯಲು ಹರಸೂರ ಇನ್ ಟೇಕ್ ವೆಲ್ ಕಾರ್ಯ ಪೂರ್ಣಗೊಳಿಸುವಂತೆ ಎಲ್ & ಟಿ ಅಧಿಕಾರಿಗಳಿಗೆ ಡಿ.ಸಿ. ಇಕ್ರಂ ಶರೀಫ್ ಗಡುವು ನೀಡಿದ್ದಾರೆ.

ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಲಬುರಗಿ ಮಹಾನಗರ ಪಾಲಿಕೆ, ಕೆ.ಯು.ಐ.ಎಫ್.ಡಿ.ಸಿ ಹಾಗೂ ಎಲ್ & ಟಿ ಕಂಪನಿ ಅಧಿಕಾರಿಗಳೊಂದಿಗೆ ನಗರದಲ್ಲಿನ ಕುಡಿಯುವ ನೀರಿನ ಸಮಸ್ಯೆ ಕುರಿತು ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಹರಸೂರ್ ಇನ ಟೇಕ್ ವೆಲ್ ಮತ್ತು ಸಲಾಂ ಟೇಕಡಿ ಬಳಿಯ 58 ಎಂ.ಎಲ್.ಡಿ ನೀರು ಸಂಸ್ಕರಣೆ ಘಟಕ ಕಾಮಗಾರಿಗಳು ಏಕಕಾಲಕ್ಕೆ ಪೂರ್ಣಗೊಂಡಲ್ಲಿ ಮಾತ್ರ ಮುಂದಿನ ಬೇಸಿಗೆಯಲ್ಲಿ ನಗರದ ಜನತೆಗೆ ಸಮರ್ಪಕ ರೀತಿಯಲ್ಲಿ ನೀರು ಕೊಡಲು ಸಾಧ್ಯವಾಗಲಿದೆ ಎಂದರು.

ಪ್ರಸ್ತುತ ನವೆಂಬರ್ ಮಾಹೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುತ್ತಿರುವುದರಿಂದ ಮುಂದಿನ ಬೇಸಿಗೆಯ ಕುಡಿಯುವ ನೀರು ಸರಬರಾಜು ನಿರ್ವಹಣೆ ತುಂಬಾ ವೈಜ್ಞಾನಿಕ ರೀತಿಯಲ್ಲಿ ಮಾಡಬೇಕಿದೆ. ಇನ್ನು ಈ ಯೋಜನೆ ಸಕಾರವಾಗಬೇಕಾದರೆ ಮಹಾಗಾಂವ ನಿಂದ 33ಕೆ.ವಿ. ವಿದ್ಯುತ್ ಲೈನ್ ಕಾಮಗಾರಿ ಸಹ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕಿದೆ. ಒಟ್ಟಾರೆಯಾಗಿ ಕುಡಿಯುವ ನೀರಿನ ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ಮಾಡುವಂತೆ ಅಧಿಕಾರಿಗಳಿಗೆ ಡಿ.ಸಿ ಖಡಕ್ ಸೂಚನೆ ನೀಡಿದರು.

727 ಕಿ.ಮೀ ಪೈಪ್ ಲೈನ್ ಪೂರ್ಣ

ಕಲಬುರಗಿ ನಗರದಲ್ಲಿನ 247 ಕುಡಿಯುವ ನೀರು ಯೋಜನೆಯಡಿ ಇದುವರೆಗೆ 899 ಕಿ.ಮೀ ಪೈಕಿ 727 ಕಿ.ಮೀ ಪೈಪ್ ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸಿದೆ. 62 ಸಾವಿರ ಪೈಕಿ 38 ಸಾವಿರ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಿದೆ. 12 ಟ್ಯಾಂಕ್ (ಇ.ಎಲ್.ಎಸ್.ಆರ್) ಪೈಕಿ 8 ನಿರ್ಮಿಸಿ ಕಾರ್ಯಚರಣೆ ಅರಂಭಿಸಿದ್ದು, ಇನ್ನುಳಿದ ನಾಲ್ಕು ಟ್ಯಾಂಕ್ ಕಾಮಗಾರಿ ಅಂತಿಮ ಹಂತದಲ್ಲಿದೆ ಎಂದು ಎಲ್ & ಟಿ ಪೊಜೆಕ್ಟ್ ಮ್ಯಾನೇಜರ್ ಪ್ರಭಾಕರನ್ ಯೋಜನೆಯ ಕಾರ್ಯ ಪ್ರಗತಿ ಸಭೆಗೆ ವಿವರಿಸಿದರು.

ಸಭೆಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ಆಯುಕ್ತ ಪಿ.ತ್ರವಣಕುಮಾರ, ಕೆ.ಯು.ಐ.ಎಫ್.ಡಿ.ಸಿ ಅಧೀಕ್ಷಕ ಅಭಿಯಂತ ಆರ್.ಪಿ.ಜಾಧವ, ಎಲ್ & ಟಿ ಕಂಪನಿಯ ಹಿರಿಯ ಅಧಿಕಾರಿಗಳಾದ ವೆಂಕಟೇಶ, ನಾಗರಾಜ ಹಾಗೂ ಪಾಲಿಕೆ–ಕೆ.ಯು.ಐ.ಎಫ್.ಡಿ.ಸಿ ಅಧಿಕಾರಿ ಸಿಬ್ಬಂದಿಗಳಿದ್ದರು.

ಸಾಂಸ್ಕೃತಿಕ ಸ್ಪರ್ಧೆ:ಎಸ್‌ಬಿಆರ್ ವಿದ್ಯಾರ್ಥಿಗಳು ವಿಭಾಗ ಮಟ್ಟಕ್ಕೆ ಆಯ್ಕೆ



ಕಲಬುರಗಿ: ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ (ಎಸ್.ಬಿ.ಆರ್.) ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಅತ್ಯುತ್ತಮ ಸಾಧನೆ ಮಾಡುವ ಮೂಲಕ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಜಿಲ್ಲಾ ಮಟ್ಟದಲ್ಲಿ ನಡೆದ ಒಟ್ಟು 11 ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗಮನಾರ್ಹ ಸಾಧನೆ ಮೆರೆದಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಪ್ರತ್ಯೇಕವಾಗಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ 2026ನೇ ಸಾಲಿನಕಲಬುರಗಿ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಗಳನ್ನು ದಿನಾಂಕ 17–11–2026 ರಂದು ನಗರದ ಸೂಪರ್ ಮಾರ್ಕೆಟ್‌ನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ (ಎಂ.ಪಿ.ಎಚ್.ಎಸ್.) ಆಯೋಜಿಸಲಾಗಿತ್ತು.

ಈ ಸ್ಪರ್ಧೆಗಳಲ್ಲಿ ಎಸ್.ಬಿ.ಆರ್. ಕಾಲೇಜಿನ 14 ವಿದ್ಯಾರ್ಥಿಗಳು (11 ಪ್ರಥ–ಮ ಸ್ಥಾನ ಹಾಗೂ 1 ದ್ವಿತೀಯ ಸ್ಥಾನ) ವಿವಿಧವಿಭಾಗಗಳಲ್ಲಿ ವಿಜೇತರಾಗಿ ವಿಭಾಗ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆಯಾಗಿದ್ದಾರೆ. ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳು ಮಾತ್ರ ವಿಭಾಗ ಮಟ್ಟದ ಸ್ಪರ್ಧೆಗಳಿಗೆ ಅರ್ಹರಾಗಿರುತ್ತಾರೆ. ವಿಭಾಗ ಮಟ್ಟದ ಸ್ಪರ್ಧೆಗಳು ನ.30 ರಂದು ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಜರುಗಲಿವೆ.

11 ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿ9ಗಳು ಒಟ್ಟು 5 ಪ್ರಥಮ ಸ್ಥಾನಗಳನ್ನು ಹಾಗೂ 1 ತೃತೀಯಸ್ಥಾನವನ್ನು ಪಡೆದುಕೊಂಡಿದ್ದಾರೆ.

ಚರ್ಚಾ ಸ್ಪರ್ಧೆ (ಕನ್ನಡ): ಸಂಪದಾ ರೇವತಗಾಂವ–ಪ್ರಥಮ ಸ್ಥಾನ,ಜಾನಪದ ಗೀತೆ : ಸೌಮ್ಯಾ ಬೇಮಳಗಿ–ಪ್ರಥಮ ಸ್ಥಾನ,ಚಿತ್ರಕಲೆ ಸ್ಪರ್ಧೆ (ಫೈನ್ ಆರ್ಟ್ಸ್): ಶಿವಾಂಕ ಜಿ.ಎಂ.

–ಪ್ರಥಮ ಸ್ಥಾನ,ವಿಜ್ಞಾನ ಮಾದರಿ ತಯಾರಿಕೆ: ಮೊಹಮ್ಮದ್ ಯೂಸುಫ್ ಅನ್ಸಾರಿ–ಪ್ರಥಮ ಸ್ಥಾನ,ರಸಪ್ರಶ್ನೆ(ಸಾಮಾನ್ಯ ಜ್ಞಾನ): ಚೇತನ ಎಂ.ಜಿ. ಹಾಗೂ ಮಂಜುನಾಥ ರೆಡ್ಡಿ–ಪ್ರಥಮ ಸ್ಥಾನ, ಜಾನಪದ ನೃತ್ಯ : ಅದಿತಿ ರಾಘವೇಂದ್ರ ಸಿ.ಎ.ತೃತೀಯ ಸ್ಥಾನ ಪಡೆದಿದ್ದಾರೆ

ವಿವಿಧ 11 ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿ9ಗಳು ಒಟ್ಟು 6 ಪ್ರಥಮ ಸ್ಥಾನಗಳನ್ನು ಹಾಗೂ 1 ದ್ವಿತೀಯ ಸ್ಥಾನವನ್ನುಪಡೆದುಕೊಂಡಿದ್ದಾರೆ.

ವಿಜ್ಞಾನ ಮಾದರಿ ತಯಾ–ರಿಕೆ: ಭೂಮಿಕಾ ಮಲ್ಲಿಕಾರ್ಜುನ ಬೆಳ್ಳೆ –ಪ್ರಥಮ ಸ್ಥಾನ,ಜಾನಪದ ನೃತ್ಯ : ಮುಗ್ಧಾ ಎಸ್. ಪಾಟೀಲ –ಪ್ರಥಮ ಸ್ಥಾನ,ವಿ–ಕಪಾತ್ರಾಭಿನಯ: ಭಾಗ್ಯಶ್ರೀ ನಿಂಬಾಳ–ಪ್ರಥಮ ಸ್ಥಾನ,

ಪ್ರಬಂಧ (ಇಂಗ್ಲಿಷ್): ಸಮೀಕ್ಷಾ ಸದಲಾಪೂರ–ಪ್ರಥಮ ಸ್ಥಾನ,ಚರ್ಚಾ ಸ್ಪರ್ಧೆ (ಕನ್ನಡ): ವೈಷ್ಣವಿ ಬಿಜಾಪುರ–ಪ್ರಥ–ಮ ಸ್ಥಾನ,ರಸಪ್ರಶ್ನೆ (ಸಾಮಾನ್ಯ ಜ್ಞಾನ): ಶ್ರೇಯಸ್ ಎಸ್.ಬಿ. ಹಾಗೂ ರಾಮಚಂದ್ರ ವಿ.ಜಿ.–ಪ್ರಥಮ ಸ್ಥಾನ,ಚಿತ್ರಕಲೆ (ಫೈನ್ ಆರ್ಟ್ಸ್): ಶೌರ್ಯಾ ನೆಟ್ಟೆ –ದ್ವಿತೀಯ ಸ್ಥಾನ ಪಡೆದಿದ್ದಾರೆ.

ವಿಭಾಗ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ ಹಾಗೂ9ನೇ ಪೀಠಾಧಿಪತಿ ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪ ಅವರು ಆಶೀರ್ವದಿಸಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ಬಸವರಾಜ ದೇಶಮುಖ ಹಾಗೂಕಾಲೇಜಿನ ಪ್ರಾಚಾರ್ಯ–ಎನ್.ಎಸ್. ದೇವರಕಲ್,ಕಾಲೇಜಿನ ಮೇಲ್ವಿಚಾರಕ ಡಾ. ಶ್ರೀಶೈಲ್ ಹೊಗಾಡೆ ಹಾಗೂ ಸಮಸ್ತ ಪ್ರಾಧ್ಯಾಪಕ ವೃಂದದವರು ಹರ್ಷ ವ್ಯಕ್ತಪಡಿಸಿ,ವಿಭಾಗ ಮಟ್ಟದ ಸ್ಪರ್ಧೆಗಳಲ್ಲಿಯೂ ಹೆಚ್ಚಿನ ಯಶಸ್ಸು ಸಾಧಿಸುವಂತೆ ಶುಭ ಹಾರೈಸಿದ್ದಾರೆ.

ಪ್ರೌಢಶಾಲಾ ಸಹಶಿಕ್ಷಕರ ಮುಖ್ಯಶಿಕ್ಷಕರ ಹುದ್ದೆ ಬಡ್ತಿ ಪ್ರಕ್ರಿಯೆಗೆ ನ. 23ರಂದು ದಿನಾಂಕ ನಿಗದಿ

ಕಲಬುರಗಿ: ಪ್ರೌಢಶಾಲಾ ಸಹಶಿಕ್ಷಕರಿಂದ ಮುಖ್ಯಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂಬ ಶಿಕ್ಷಕ ಬಂಧುಗಳ ಬಹುದಿನಗಳ ಬೇಡಿಕೆಗೆ ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ. ನಮೋಶಿಯವರು ನಡೆಸಿದ ನಿರಂತರ ಪ್ರಯತ್ನದ ಫಲವಾಗಿ ಈಗ ಮಹತ್ವದ ಸ್ಪಂದನೆ ದೊರೆತಿದೆ.

ಕಳೆದ ಹಲವು ವರ್ಷಗಳಿಂದ ಮುಖ್ಯಶಿಕ್ಷಕರ ಹುದ್ದೆಯ ಬಡ್ತಿಗಾಗಿ ಅರ್ಹ ಶಿಕ್ಷಕರು ಕಾಯುತ್ತಿದ್ದರು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಶಶೀಲ್ ಜಿ. ನಮೋಶಿಯವರು ಶಿಕ್ಷಕರ ಪರವಾಗಿ ನಿರಂತರವಾಗಿ ಧ್ವನಿ ಎತ್ತಿ, ಶಾಲಾ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾ–ರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದು, ಬಡ್ತಿ ಪ್ರಕ್ರಿಯೆ ಶೀಘ್ರವಾಗಿ ಪೂರ್ಣಗೊಳಿಸುವಂತೆ ವೈಯಕ್ತಿಕ ಮುತುವರ್ಜಿ ವಹಿಸಿ ಒತ್ತಾಯಿಸುತ್ತಿದ್ದರು.



ಶಿಕ್ಷಕರ ಈ ಬಹುದಿನಗಳ ಬೇಡಿಕೆ ಕೇವಲ ಮನವಿಗೆ ಸೀಮಿತವಾಗದೆ ಕಾರ್ಯರೂಪಕ್ಕೆ ಬರಬೇಕು ಎಂಬ ಉದ್ದೇಶದಿಂದ ಇಲಾಖೆಯ ಮಟ್ಟದಲ್ಲಿ ನಿರಂತರ ಪ್ರಯತ್ನ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯುವ ಮೂಲಕ ಬಡ್ತಿ ಪ್ರಕ್ರಿಯೆಗೆ ವೇಗ ನೀಡಲು ಶಶೀಲ್ ಜಿ. ನಮೋಶಿಯವರು ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ.


'ಬಸವ ಮಂಟಪ'ದ ಹೆಸರಿನಲ್ಲಿ ಇತಿಹಾಸಕ್ಕೆ ಮಸಿ ಬಳಿಯುವ ಹುಂಬತನ!

■ ಉದಯರಶ್ಮಿ ದಿನಪತ್ರಿಕೆ

ಸಂಶೋಧನೆಯ ಹೆಸರಿನಲ್ಲಿ ಶರಣರ ಚಾರಿತ್ರ್ಯಕ್ಕೆ ಕೈಹಾಕುವ ಮೊದಲು ಇತಿಹಾಸದ ಅರಿವು ಇರಲಿ. ಬಸವಣ್ಣನವರನ್ನು ಟೀಕಿಸುವ ಸ್ವಾತಂತ್ರ್ಯವಿದೆ; ಆದರೆ ಟೀಕೆಗೆ ತಕ್ಕ ಐತಿಹಾಸಿಕ ಪುರಾವೆ, ಬೌದ್ಧಿಕ ಪ್ರಾಮಾಣಿಕತೆ ಮತ್ತು ಬರವಣಿಗೆಯ ಜವಾಬ್ದಾರಿಯೂ ಇರಬೇಕು.

ಬಸವಣ್ಣನವರನ್ನು ಓದುವುದು ಸುಲಭ. ಅವರ ವಚನಗಳನ್ನು ಉಲ್ಲೇಖಿಸುವುದೂ ಸುಲಭ. ಆದರೆ ಬಸವಣ್ಣನವರನ್ನು ಅರ್ಥ–ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಅದಕ್ಕೆ ಹನ್ನೆರಡನೇ ಶತಮಾನದ ಸಾಮಾಜಿಕ ವ್ಯವಸ್ಥೆ, ಜಾತಿ ತಾರತಮ್ಯ, ಧಾರ್ಮಿಕ ಕಂದಾಚಾರ, ಶೋಷಣೆಯ ಸ್ವರೂಪ ಮತ್ತು ಅವರು ಹುಟ್ಟುಹಾಕಿದ ವೈಚಾರಿಕ ಕ್ರಾಂತಿಯ ಆಳವನ್ನು ಅರಿತುಕೊಳ್ಳಬೇಕು. ಇತಿಹಾಸದ ಈ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದೆ ಬಸವಣ್ಣನವರ ವ್ಯಕ್ತಿತ್ವಕ್ಕೆ ತೀರ್ಪು ನೀಡಲು ಹೊರಡುವುದು ಸಂಶೋಧನೆಯಲ್ಲ; ಅದು ಪೂರ್ವಗ್ರಹಕ್ಕೆ ಇತಿಹಾಸದ ಮುಖವಾಡ ತೊಡಿಸಿದಂತಾಗುತ್ತದೆ.

ಅಮೆರಿಕ ನಿವಾಸಿ ಲೇಖಕ ರವಿ ಹಂಜ್ ಅವರ 'ಬಸವ ಮಂಟಪ' ಕೃತಿಯನ್ನು ಸುತ್ತುವರಿದಿರುವ ವಿವಾದ ಈಗ ಇದೇ ಪ್ರಶ್ನೆಯನ್ನು ಮುನ್ನೆಲೆಗೆ ತಂದಿದೆ. ಬಸವಣ್ಣನವರ ಕುರಿತು ಕೃತಿ ಬರೆಯುವುದು ಅಪರಾಧವಲ್ಲ. ಅವರ ವಿಚಾರಗಳನ್ನು ವಿಮರ್ಶಿಸುವುದೂ ತಪ್ಪಲ್ಲ. ಆದರೆ ವಿಮರ್ಶೆ ಮತ್ತು ಚಾರಿತ್ರ್ಯಹನನದ ನಡುವೆ ಸ್ಪಷ್ಟವಾದ



ಗೆರೆಯಿದೆ. ಆ ಗೆರೆಯನ್ನು ದಾಟಿದಾಗ ಅದನ್ನು ಸಂಶೋಧನೆ ಎಂದು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

ಬಸವಣ್ಣನವರು ನಿಮ್ಮ ಕಲ್ಪನೆಯ ಪಾತ್ರವಲ್ಲ, ಒಂದು ಯುಗದ ವೈಚಾರಿಕ ಶಕ್ತಿ!

ಬಸವಣ್ಣನವರು ಬದುಕಿದ ಕಾಲಘಟ್ಟದಲ್ಲಿ ಜಾತಿಯ ಹೆಸ–ರಿನಲ್ಲಿ ಮನುಷ್ಯನನ್ನು ಮನುಷ್ಯನಿಂದ ಬೇರ್ಪಡಿಸಲಾಗುತ್ತಿತ್ತು. ಕಾಯಕ ಮಾಡುವವನಿಗೆ ಸಾಮಾಜಿಕ ಗೌರವ ನಿರಾಕರಿಸಲಾಗುತ್ತಿತ್ತು. ಮಹಿಳೆಯರಿಗೆ ಸಮಾನ ಅವಕಾಶಗಳಿರಲಿಲ್ಲ. ಧರ್ಮದ ಹೆಸ–ರಿನಲ್ಲಿ ಅಸಮಾನತೆಗಳಿಗೆ ಸಮರ್ಥನೆ ನೀಡಲಾಗುತ್ತಿತ್ತು. ಇಂತಹ ವ್ಯವಸ್ಥೆಯ ನಡುವೆ ಸಮಾನತೆ, ಕಾಯಕ, ದಾಸೋಹ ಮತ್ತು ಮಾನವೀಯತೆಯನ್ನು ಪ್ರತಿಪಾದಿಸಿದ ಬಸವಣ್ಣನವರು ಸಾಮಾನ್ಯ ವ್ಯಕ್ತಿಯಲ್ಲ.

ಅವರು ಕೇವಲ ಧಾರ್ಮಿಕ ನಾಯಕನಲ್ಲ

ಸಮಾಜದ ಚಿಂತನೆಯ ದಿಕ್ಕನ್ನೇ ಬದಲಿಸಲು ಪ್ರಯತ್ನಿಸಿದ ಮಹತ್ವದ ವೈಚಾರಿಕ ಶಕ್ತಿ. ಅವರ ವಚನಗಳು ಮನುಷ್ಯನ ಘನತೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಕುರಿತು ಇಂದಿಗೂ ಪ್ರಶ್ನೆಗಳನ್ನು ಎತ್ತುತ್ತವೆ.

ಇಂತಹ ವ್ಯಕ್ತಿತ್ವವನ್ನು 'ದ್ರೋಹಿ', 'ಕಪಟಿ' ಎಂಬಂತಹ ಪದಗಳ ಮೂಲಕ ಚಿತ್ರಿಸಲಾಗಿದೆ ಎಂಬ ಆರೋಪ ಎದುರಾದಾಗ ಲೇಖಕರು ಅದಕ್ಕೆ ಸಮರ್ಥವಾದ ಐತಿಹಾಸಿಕ ಆಧಾರಗಳನ್ನು ಸಾರ್ವಜನಿಕವಾಗಿ ಮಂಡಿಸಬೇಕಾಗುತ್ತದೆ. ಯಾರನ್ನಾದರೂ ಹೊಗಳುವುದು ಸಂಶೋಧನೆಯಲ್ಲದಿದ್ದರೆ, ಯಾರನ್ನಾದರೂ ಹೀನಾಯವಾಗಿ ಚಿತ್ರಿಸುವುದೂ ಸಂಶೋಧನೆಯಾಗುವುದಿಲ್ಲ.

ಲೇಖಕರಿಗೆ ಒಂದು ಪ್ರಶ್ನೆ

ನಿಮ್ಮ ಆರೋಪಗಳಿಗೆ ಆಧಾರವೇನು? ಯಾವ ಐತಿಹಾಸಿಕ ದಾಖಲೆಗಳು ನಿಮ್ಮ ನಿರ್ಣಯವನ್ನು ಬೆಂಬಲಿಸುತ್ತವೆ? ಯಾವ ಸಮಕಾಲೀನ ಆಕರಗಳು ನಿಮ್ಮ ವಾದಕ್ಕೆ ಪೂರಕವಾಗಿವೆ? ವಚನಗಳ ಯಾವ ಭಾಗವನ್ನು ಆಧಾರವಾಗಿಟ್ಟುಕೊಂಡಿದ್ದೀರಿ? ಈ ಪ್ರಶ್ನೆಗಳಿಗೆ ಉತ್ತರಿಸುವುದೇ ನಿಜವಾದ ಬೌದ್ಧಿಕ ಪ್ರಾಮಾಣಿಕತೆ.

ಅನುಭವ ಮಂಟಪದ ಮಹತ್ವ ಅರಿಯದೆ ಶರಣರ ಚಿಂತನೆಗೆ ತೀರ್ಪು ನೀಡುವುದೇ?

ಅನುಭವ ಮಂಟಪವೆಂದರೆ ಕೇವಲ ಒಂದು ಕಟ್ಟಡ ಅಥವಾ ಚರ್ಚೆಯ ವೇದಿಕೆಯಲ್ಲ. ಅದು ಅನುಭವ, ವಿಚಾರ, ಪ್ರಶ್ನೆ, ಸಂವಾದ ಮತ್ತು ಸಮಾನತೆಯ ತಾತ್ವಿಕ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ ಸೇರಿದಂತೆ ಅನೇಕ ಶರಣರು ತಮ್ಮ ಅನುಭವ ಮತ್ತು ಚಿಂತನೆಗಳ ಮೂಲಕ ಕನ್ನಡ ಸಾಹಿತ್ಯ ಹಾಗೂ ಸಾಮಾಜಿಕ ಚಿಂತನೆಗೆ ವಿಶಿಷ್ಟ ಕೊಡುಗೆ ನೀಡಿದ್ದಾರೆ.

ಅನುಭವ ಮಂಟಪದ ಐತಿಹಾಸಿಕ ಸ್ವರೂಪ, ಅದರ ಕಾಲಘಟ್ಟ ಮತ್ತು ಸಂಘಟನೆಯ ಕುರಿತು ವಿದ್ವಾಂಸರಲ್ಲಿ ಚರ್ಚೆ ಇರಬಹುದು. ಆ ಚರ್ಚೆ ನಡೆಯಲಿ. ಹೊಸ ಸಂಶೋಧನೆಗಳು ಬರಲಿ. ಆದರೆ ಆ ಚರ್ಚೆ ದಾಖಲೆ ಮತ್ತು ತರ್ಕದ ಆಧಾರದ ಮೇಲೆ ನಡೆಯಬೇಕೇ ಹೊರತು ವೈಯಕ್ತಿಕ ಅಭಿಪ್ರಾಯಗಳ ಆಧಾರದ ಮೇಲಲ್ಲ.

ಶರಣರ ಬದುಕು ಮತ್ತು ವಿಚಾರಗಳನ್ನು ವಿಶ್ಲೇಷಿಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಅವರ ಚಿಂತನೆಗಳನ್ನು ಕೀಳುಮಟ್ಟದ ಭಾಷೆಯಲ್ಲಿ ಚಿತ್ರಿಸುವುದರಿಂದ ಸಂಶೋಧನೆಯ ಗುಣಮಟ್ಟ ಹೆಚ್ಚುವುದಿಲ್ಲ. ಬದಲಾಗಿ, ಲೇಖಕರ ಭಾಷೆ, ವಾದ ಮತ್ತು ಆಧಾರಗಳ ವಿಶ್ವಾಸಾರ್ಹತೆಯೇ ಪ್ರಶ್ನೆಗೆ ಒಳಗಾಗುತ್ತದೆ.

ಅಮೆರಿಕದಲ್ಲಿ ಕುಳಿತು ಬರೆಯುವುದರಿಂದ ಇತಿಹಾಸದ ಮೇಲೆ ವಿಶೇಷ ಅಧಿಕಾರ ಸಿಗುವುದಿಲ್ಲ!

ವಿದೇಶದಲ್ಲಿ ನೆಲೆಸಿರುವುದು ತಪ್ಪಲ್ಲ. ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಕನ್ನಡದ ಇತಿಹಾಸದ ಕುರಿತು ಬರೆಯಬಹುದು.



ಆದರೆ ಭೌಗೋಳಿಕ ಅಂತರವು ಐತಿಹಾಸಿಕ ಹೊಣೆಗಾರಿಕೆಯಿಂದ ಮುಕ್ತಿ ನೀಡುವುದಿಲ್ಲ.

ಬಸವಣ್ಣನವರ ವಿಚಾರಗಳು ಕರ್ನಾಟಕದ ಗಡಿಗಳನ್ನು ದಾಟಿ ಜಗತ್ತಿನ ಅನೇಕ ಭಾಗಗಳಿಗೆ ತಲುಪಿವೆ. ಅವರ ತತ್ವವನ್ನು ಗೌರವಿಸುವವರು ಒಂದು ಜಾತಿ ಅಥವಾ ಸಮುದಾಯಕ್ಕೆ ಮಾತ್ರ ಸೀಮಿತರಾಗಿಲ್ಲ. ವಿವಿಧ ಸಮುದಾಯಗಳ ಜನರು ಅವರ ಸಮಾನತೆಯ ಸಂದೇಶದಲ್ಲಿ ತಮ್ಮ ಬದುಕಿನ ಆಶಯಗಳನ್ನು ಕಾಣುತ್ತಾರೆ.

ಅಂತಹ ಜನಮಾನಸದ ಗೌರವಕ್ಕೆ ಪಾತ್ರವಾದ ವ್ಯಕ್ತಿತ್ವದ ಕು–ರಿತು ಬರೆಯುವಾಗ ಲೇಖಕನಿಗೆ ಹೆಚ್ಚಿನ ಜವಾಬ್ದಾರಿ ಇರಬೇಕು. ಲೇಖಕನಿಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕಿದೆ ಎಂದ ಮಾತ್ರಕ್ಕೆ ಆ ಅಭಿಪ್ರಾಯವೇ ಐತಿಹಾಸಿಕ ಸತ್ಯವಾಗುವುದಿಲ್ಲ.

ಸಂಶೋಧನೆ ಎಂದರೆ ತನ್ನ ನಿಲುವಿಗೆ ಪೂರಕವಾದ ಸಂಗತಿಗಳನ್ನು ಮಾತ್ರ ಆರಿಸಿಕೊಳ್ಳುವುದಲ್ಲ. ತನ್ನ ವಾದಕ್ಕೆ ವಿರುದ್ಧವಾದ ದಾಖಲೆಗಳನ್ನೂ ಪ್ರಾಮಾಣಿಕವಾಗಿ ಪರಿಶೀಲಿಸುವುದು.

**ಬಸವಣ್ಣನವರನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಅದಕ್ಕೆ ಹನ್ನೆರಡನೇ ಶತಮಾನದ

ಆರೋಗ್ಯ–ಶಿಕ್ಷಣ–ವಸತಿ ನಿಲಯಗಳ ಸುಧಾರಣೆ ಆದ್ಯತೆ ನೀಡಿ

ಶಾಲೆಗಳ ಮಾನ್ಯತೆ ನವೀಕರಣ- ರಸ್ತೆ ಕಾಮಗಾರಿಗಳಿಗೆ ವೇಗ ಹಾಗೂ ಸರ್ಕಾರಿ ಆಸ್ತಿಗಳ ರಕ್ಷಣೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅಧಿಕಾರಿಗಳಿಗೆ ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯಲ್ಲಿ ಆರೋಗ್ಯ, ಶಿಕ್ಷಣ, ವಸತಿ ನಿಲಯಗಳ ನಿರ್ವಹಣೆ, ರಸ್ತೆ ಅಭಿವೃದ್ಧಿ ಹಾಗೂ ರೈತರ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ ಬಾಕಿ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಪರಿಹರಿಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಅವರು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಶನಿವಾರ ನಡೆದ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೋಲ್ಹಾರದತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂಸಿಎಚ್)ಯ ಹೆರಿಗೆ ಪ್ರಕರಣಗಳನ್ನು ವಿಜಯಪುರಕ್ಕೆ ರೆಫರ್ ಮಾಡುತ್ತಿರುವ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಅವರು, ತುರ್ತು ಹಾಗೂ ಸಂಕೀರ್ಣ ಹೆರಿಗೆ ಪ್ರಕರಣಗಳಿದ್ದರೆ ಮಾತ್ರ ರೆಫರ್ ಮಾಡಬೇಕು. ಈ ಕುರಿತು ಜಿಲ್ಲೆಯ ಎಲ್ಲ ತಾಲೂಕು ಆಸ್ಪತ್ರೆಗಳ ವೈದ್ಯಾಧಿಕಾರಿಗಳಿಗೆ ನೋಟಿಸ್ ನೀಡಿ, ಪ್ರಕರಣಗಳನ್ನು ರೆಫರ್ ಮಾಡಲು ಕಾರಣವೇನು ಎಂಬ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾಲಕಾಲಕ್ಕೆ ವಸತಿ ನಿಲಯಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಜಿಲ್ಲೆಯ ವಸತಿ ನಿಲಯಗಳ ವಸ್ತುಸ್ಥಿತಿಯ ವರದಿ ಸಲ್ಲಿಸಲು ಸೂಚಿಸಲಾಯಿತು. ಸರ್ಕಾರಿ ಆಸ್ತಿಗಳ ರಕ್ಷಣೆ ಹಾಗೂ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಾನೂನಾತ್ಮಕ ಸಮಸ್ಯೆಗಳ ಇತ್ಯರ್ಥಕ್ಕೆ ಜಿಲ್ಲಾಧಿಕಾರಿಗಳು ಮತ್ತು ಸಿಇಒ ಅಗತ್ಯ ಕಾನೂನು ಸಲಹೆಗಾರರನ್ನು ನೇಮಕ ಮಾಡುಕೊಳ್ಳುವಂತೆಯೂ, ಇಲಾಖೆಗಳ ಲೀಗಲ್ ಸೆಲ್‌ಗಳನ್ನು ಸಕ್ರಿಯಗೊಳಿಸಿ, ಅಧಿಕಾರಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಬೇಕು.

ಇದರಿಂದ ಕಾನೂನು ಸಂಬಂಧಿತ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಅನುಕೂಲವಾಗಲಿದೆ ಎಂದರು.

ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದ ಲಾಗಿನ್ ಅಧಿಕಾರವನ್ನು ಸಿಇಒ ಅವರಿಗೆ ನೀಡುವ ಅದರ ಸಾಧಕ ಬಾಧಕಗಳ ಕುರಿತಾಗಿ ಸಭೆ ಸುದೀರ್ಘ ಚರ್ಚೆ ನಡೆಸಿತು. ಜಿಲ್ಲಾಧಿಕಾರಿಗಳು ಹಾಗೂ ಸಿಇಒ ಅವರು ಕಾಲಕಾಲಕ್ಕೆ ಪ್ರಮುಖ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಬೇಕು. ರಸ್ತೆಗಳ ಸುಧಾರಣೆಗೆ ಟೆಂಡರ್ ಕರೆದು ಕಾಮಗಾರಿಗಳಿಗೆ ವೇಗ ನೀಡಬೇಕು. ಟೆಂಡರ್ ಪ್ರಕ್ರಿಯೆ ಹಾಗೂ ಕಾಮಗಾರಿಗಳ ಪ್ರಗತಿಯ ಸಂಪೂರ್ಣ ವಿವರ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ಶಾಸಕರಾದ ಅಪ್ಪಾಜಿ ಸಿ.ಎಸ್ ನಾಡಗೌಡ,ಅಶೋಕ ಮನಗೂಳಿ, ಸುನೀಲಗೌಡ ಪಾಟೀಲ, ಶಾಸಕ ರಾಜುಗೌಡ ಪಾಟೀಲ,ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಸಿದ್ದಾಮಪ್ಪ ಹೊನಮೋಡೆ, ಕೆಡಿಪಿ ನಾಮನಿರ್ದೇಶಿತ ಸದಸ್ಯರಾದ ಶಿವಣ್ಣ ಪಿ. ಕೋಟಾರಗಸ್ತಿ, ನೂರಅಹ್ಮದ ಅತ್ತಾರ, ಸತೀಶಕುಮಾರ ಅಡವಿ ಹಾಗೂ ಶ್ರೀಮತಿ ಪ್ರಿಯಾಂಕ ಚೇತನ ತೊರವಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಪ್ರಕಾಶ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅಗತ್ಯ ವಿದ್ಯುತ್ ಪೂರೈಕೆಗೆ ಸರ್ಕಾರಕ್ಕೆ ಪ್ರಸ್ತಾವನೆ :ಶಾಸಕ ಶಿವಾನಂದ ಪಾಟೀಲ



ಜಿಲ್ಲೆಗೆ ಹಂಚಿಕೆಯಾಗಿರುವ ವಿದ್ಯುತ್ ಪ್ರಮಾಣ ಕಡಿಮೆಯಾಗಿದ್ದರೆ, ಅಗತ್ಯ ವಿದ್ಯುತ್ ಪೂರೈಕೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಎಂದು ಶಾಸಕ ಶಿವಾನಂದ ಪಾಟೀಲ ಅವರು ಇಂಧನ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಎಲ್ಲ ಅಧಿಕಾರಿಗಳು ಸಮನ್ವಯದಿಂದ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಿ ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ತೀವ್ರ ಮಳೆ ಕೊರತೆಯಿಂದ ತೊಗರಿ, ಹತ್ತಿ, ಮೆಕ್ಕೆಜೋಳ ಹಾಗೂ ಕಬ್ಬು ಹಾಗೂ ಇತರೆ ಬೆಳೆಗಳು ಸೇರಿದಂತೆ ಒಟ್ಟು 5.20 ಲಕ್ಷ ಹೆಕ್ಟೇರ್ ಕೃಷಿ ಮತ್ತು ತೋಟಗಾರಿಕೆ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವ ಕುರಿತು ಎನ್‌ಡಿ ಆರ್‌ಎಫ್ ಮಾರ್ಗಸೂಚನೆಯಂತೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಹಿಂಗಾರು ಹಂಗಾಮಿನಲ್ಲಿಯೂ ಶೇ.96ರಷ್ಟು ಮಳೆ ಕೊರತೆಯಿಂದ ಬಿತ್ತನೆಗೆ ಹಿನ್ನಡೆಯಾಗಿದ್ದು, ಜೋಳ, ಕಡಲೆ ಹಾಗೂ ಗೋಧಿ ಬೆಳೆಗಳು ತೇವಾಂಶ ಕೊರತೆಯಿಂದ ಬಾಡುತ್ತಿವೆ. ಬೆಳೆ ವಿಮೆ ಪರಿಹಾರಕ್ಕೆ ಸಂಬಂಧಿಸಿದಂತೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಸಭೆಗಳಲ್ಲಿ ಜಿಲ್ಲೆಯ ಬರ ಪರಿಸ್ಥಿತಿ ಮತ್ತು ಬೆಳೆ ಹಾನಿಯ ಕುರಿತು ಕೃಷಿ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅವರು ಸಭೆಗೆ ಮಾಹಿತಿ ನೀಡಿದರು.

"ವಿಜಯಪುರ ಜಿಲ್ಲೆಯಲ್ಲಿ ಕಬ್ಬಿನ ತಾಕುಗಳಿಗೆ ಬೆಂಕಿ ತಗುಲುವ ಅವಘಡಗಳು ಸಂಭವಿಸುತ್ತಿರುವ ಬಗ್ಗೆ ಗಮನಹರಿಸಬೇಕು. ರೈತರಿಗೆ ಸೂಕ್ತ ಪರಿಹಾರ ಒದಗಿಸಲು ಸಂಬಂಧಿಸಿದ ಇಲಾಖೆ ಕ್ರಮ ಕೈಗೊಳ್ಳಬೇಕು.ವಿದ್ಯುತ್ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆಗೆ ಆದ್ಯತೆ ನೀಡಿ, ರೈತರಿಗೆ ಯಾವುದೇ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು."



■ ಯಶವಂತರಾಯಗೌಡ ಪಾಟೀಲ
ಇಂಡಿ ಶಾಸಕರು

ಬಸವಣ್ಣನವರ ಕುರಿತು ಆಕ್ಷೇಪಾರ್ಹ ಹೇಳಿಕೆಗೆ ತೀವ್ರ ಖಂಡನೆ। ವಿರಕ್ತಮಠ ಹಾಗೂ ಬಸವಪರ ಸಂಘಟನೆಗಳಿಂದ ಮುಖ್ಯಮಂತ್ರಿ ಗೆ ಮನವಿ

ರವಿ ಹಂಜ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



■ ಉದಯರಶ್ಮಿ ದಿನಪತ್ರಿಕೆ

ಚಡಚಣ: ವಿಶ್ವಗುರು ಬಸವಣ್ಣನವರು ಹಾಗೂ ವೀರಶೈವ ಲಿಂಗಾಯತ ಸಮುದಾಯದ ಕುರಿತು ಲೇಖಕ ರವಿ ಹಂಜಿ ಅವರು ಅವಹೇಳನಕಾರಿ ಹಾಗೂ ಆಧಾರರಹಿತ ಹೇಳಿಕೆಗಳನ್ನು ಖಂಡಿಸಿ, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಚಡಚಣ ತಾಲೂಕು ಘಟಕ, ವಿರಕ್ತಮಠ ಹಾಗೂ ಬಸವಪರ ಸಂಘಟನೆಗಳು ರಾಜ್ಯ ಸರ್ಕಾರವನ್ನು ಒತ್ತಾಯಿಸಿವೆ.

ಲೇಖಕ ರವಿ ಹಂಜಿ ವಿರುದ್ಧ ಘೋಷಣೆ ಕೂಗುತ್ತ ಬಸವೇಶ್ವರ ವೃತ್ತದಿಂದ ತಹಶೀಲದಾರ ಕಛೇರಿಯವರೆಗೆ ಪ್ರತಿಭಟನೆ ಮಾಡಲಾಯಿತು ನಂತರ ಚಡಚಣ ಉಪತಹಶೀಲ್ದಾರ ಆರ್. ಎಸ್.ಚವ್ಹಾಣ ಅವರ ಮುಖಾಂತರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಈ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಮನವಿ ಸಲ್ಲಿಸಲು ಸಿದ್ಧಪಡಿಸಿರುವ ಸಂಘಟನೆಗಳು, ರವಿ ಹಂಜಿ ಅವರ ಹೇಳಿಕೆಗಳು ಮತ್ತು ಬರಹಗಳು ಬಸವಣ್ಣನವರ ಅನುಯಾಯಿಗಳು ಹಾಗೂ ವೀರಶೈವ ಲಿಂಗಾಯತ ಸಮುದಾಯದವರಭಾವನೆಗಳಿಗೆತೀವ್ರನೋವುಂಟು ಮಾಡಿವೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸಂವಿಧಾನ ನೀಡಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರವನ್ನು ಮಹಾಸಭೆ ಗೌರವಿಸುತ್ತದೆ. ಆದರೆ ಅಭಿವ್ಯಕ್ತಿ ಸ್ವಾತಂತ್ರದ ಹೆಸರಿನಲ್ಲಿ ಬಸವಣ್ಣನವರನ್ನು ಕೊಲೆಗಡುಕ, ದರೋಡೆಕೋರ ಎಂದು ಬಿಂಬಿಸುವುದು ಹಾಗೂ ಬಿಜ್ಜಳನ ಖಜಾನೆಯನ್ನು ದುರುಪಯೋಗಪಡಿಸಿಕೊಂಡು ಶರಣ ದಾಸೋಹ ಮಾಡಿದರು ಎಂಬಂತಹ ಆರೋಪಗಳನ್ನು ಮಾಡುವುದು ಒಪ್ಪುವಂತಹದ್ದಲ್ಲ. ಇಂತಹ ಹೇಳಿಕೆಗಳು ಸಮಾಜದಲ್ಲಿ ಅಶಾಂತಿ ಮತ್ತು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಚಡಚಣ ತಾಲೂಕು ಘಟಕ ಆತಂಕ ವ್ಯಕ್ತಪಡಿಸಿವೆ.

ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ 'ಬಸವ ಮಂಟಪ' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ರವಿ ಹಂಜಿ ಅವರ ವಿವಾದಾತ್ಮಕ ಹೇಳಿಕೆಗಳನ್ನು ಒಳಗೊಂಡಿರುವ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆದುಹಾಕಲು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಪ್ರಚೋದನಕಾರಿ ಹೇಳಿಕೆಗಳ ಕುರಿತು ಸೂಕ್ತ ತನಿಖೆ ನಡೆಸಿ, ಕಾನೂನು ಉಲ್ಲಂಘನೆ ಕಂಡುಬಂದಲ್ಲಿ ಅವರನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ವಿಶ್ವಗುರು ಬಸವಣ್ಣನವರ ತತ್ವ, ಆದರ್ಶ ಹಾಗೂ ಸಮಾಜ ಸುಧಾರಣೆಯ ಕೊಡುಗೆಗಳಿಗೆ ಧಕ್ಕೆ ತರುವಂತಹ ಹೇಳಿಕೆಗಳನ್ನು ಸಹಿಸುವುದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಚಡಚಣ ತಾಲೂಕು ಘಟಕ ಹಾಗೂ ಚಡಚಣದ ಬಸವಾಭಿಮಾನಿಗಳು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಷಡಕ್ಷರ ಮಹಾಸ್ವಾಮಿ, ಗುರು ಗುರುಪಾದೇಶ್ವರ ಶಿವಾಚಾರ್ಯರು ಹಿರೇಮಠ ಹಾವಿನಾಳ ಹತ್ತಳ್ಳಿ, ಸಂಗಮೇಶ ಅವಜಿ, ಮುರುಗೇಂದ್ರ ಸಿಂಪಿ, ದೇವೆಂದ್ರಪ್ಪಗೌಡ ಪಾಟೀಲ, ಬಾಬುಗೌಡ ಪಾಟೀಲ, ಮಹಾದೇವ ಬನಸೋಡೆ, ವಸಂತ ಭೈರಾಮಡಿ, ಮಲ್ಲಪ್ಪ ಕಟ್ಟಿಮನಿ, ಶಿವಾಜಿ ಬಾಮಣೆ, ಸೋಮು ಬಡಿಗೇರ, ವಿದ್ಯಾ ಕಲ್ಯಾಣಶೆಟ್ಟಿ, ತ್ರಿವೇಣಿ ಬಾಡನ, ಸುನಂದಾ ಸಿಂಪಿ, ರತ್ನಮ್ಮಾ ಭಂಡರಕವಠೆ, ವಿ.ಸಿ.ಬಾಡನ, ಎಮ್.ಎಸ್. ಕಂಬಾರ, ಬಿ.ಪಿ.ಅವಟಿ, ಎಸ್.ಎಮ್.ಅವಟಿ, ಸಿದ್ದರಾಮ ರಾವುತ, ಚಂದ್ರಶೇಖರ ಕಟ್ಟಿಮನಿ, ಜಕ್ಕಪ್ಪ ವಾಘಮೋರೆ ಸೇರಿದಂತೆ ಹಲವರಿದ್ದರು.

ಬಸವ ಮಂಟಪ ಪುಸ್ತಕದಲ್ಲಿನ ಆಕ್ಷೇಪಾರ್ಹ ಅಂಶಗಳ ಕುರಿತು ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಲು ಬಸವಾಭಿಮಾನಿಗಳು ಒತ್ತಾಯಿಸಿ ಸರ್ಕಾರಕ್ಕೆ ಮನವಿ

ರವಿ ಹಂಜ್ ಮೇಲೆ ಕಾನೂನು ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ರವಿ ಹಂಜ್ ಅವರು ರಚಿಸಿರುವ ಬಸವ ಮಂಟಪ ಪುಸ್ತಕದಲ್ಲಿನ ಆಕ್ಷೇಪಾರ್ಹ ಅಂಶಗಳ ಕುರಿತು ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಿ, ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಹಾಗೂ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಶ್ರೀ ಬಸವೇಶ್ವರ ಉತ್ಸವ ಸಮಿತಿ ನೇತೃತ್ವದಲ್ಲಿ ಶನಿವಾರರಂದು ತಾಳಿಕೋಟೆ ತಾಲ್ಲೂಕಿನ ಸಮಸ್ತ ನಾಗರಿಕರು, ಬಸವ ಅಭಿಮಾನಿಗಳು, ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಪ್ರತಿಭಟನೆ ನಡೆಸಿ ತಹಶಿಲ್ದಾರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಮಯದಲ್ಲಿ ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್. ಎಸ್.ಪಾಟೀಲ(ಕೂಚಬಾಳ) ಅವರು ಮಾತನಾಡಿ, ಬಸವ ಮಂಟಪ ಪುಸ್ತಕದಲ್ಲಿನ ಕೆಲವು ಬರಹಗಳು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆ ಹಾಗೂ ಆಕ್ಷೇಪಗಳಿಗೆ ಕಾರಣವಾಗಿದ್ದು, ಸಮಾಜದ ಶಾಂತಿ, ಸೌಹಾರ್ದತೆ, ಪರಸ್ಪರ ಗೌರವ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ಉಂಟಾಗುವ ಆತಂಕ ಮೂಡಿಸಿವೆ. ಸಾಹಿತ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಪ್ರಮುಖ ಮೌಲ್ಯಗಳಾಗಿದ್ದರೂ, ಸಮಾಜದ ಶಾಂತಿ ಹಾಗೂ ವ್ಯಕ್ತಿಗಳ ಗೌರವವನ್ನು ಕಾಪಾಡುವುದು ಅಷ್ಟೇ ಮುಖ್ಯವಾಗಿದೆ. ಯಾವುದೇ ಕೃತಿಯಲ್ಲಿನ ಬರಹಗಳು ಕಾನೂನುಬಾಹಿರವಾಗಿದ್ದರೆ ಅವುಗಳ ಕುರಿತು ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಎಂದ ಅವರು ಪುಸ್ತಕದಲ್ಲಿನ ಆಕ್ಷೇಪಾರ್ಹ ಅಂಶಗಳ ಕುರಿತು ಸಮಗ್ರ ತನಿಖೆ ನಡೆಸಬೇಕು. ಕಾನೂನು ಉಲ್ಲಂಘನೆಯಾಗಿರುವುದು ಸಾಬೀತಾದಲ್ಲಿ ಪುಸ್ತಕದ ಮಾರಾಟ ಮತ್ತು ವಿತರಣೆಯನ್ನು ತಡೆದು, ಮುಟ್ಟುಗೋಲು ಹಾಕಿಕೊಳ್ಳಲು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಬೇಕು. ಕೃತಿಯ ರಚನೆ, ಪ್ರಕಟಣೆ ಹಾಗೂ ಪ್ರಸರಣದಲ್ಲಿ ಕಾನೂನುಬಾಹಿರ ಕೃತ್ಯ ಎಸಗಿರುವುದು ದೃಢಪಟ್ಟಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸಮಾಜದಲ್ಲಿ ಅಶಾಂತಿ ಅಥವಾ ಸಂಘರ್ಷ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದರು.

ಪಂಚಮಸಾಲಿ ಸಮಾಜದ ಮುಖಂಡ ವಿರೇಶಗೌಡ ಬಾಗೇವಾಡಿ, ಪುರಸಭೆ ಮಾಜಿ ಸದಸ್ಯ ವಿಜಯಸಿಂಗ್ ಹಜೇರಿ, ಕರವೇ ಜಿಲ್ಲಾ ಸಂಘಟನಾ ಸಂಚಾಲಕ ಜೈಭೀಮ ಮುತ್ತಗಿ ಮಾತನಾಡಿ ವಿಶ್ವಗುರು ಬಸವಣ್ಣನವರನ್ನು ಅಪಮಾನಿಸಿದ ಲೇಖಕ ರವಿ ಹಂಜ್ ಅವರ ಪುಸ್ತಕವನ್ನು ಸಂಪೂರ್ಣವಾಗಿ ನಿಷೇಧಿಸಿ, ಅವರನ್ನು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಶ್ರೀ ಬಸವೇಶ್ವರ ವೃತ್ತದಲ್ಲಿ ಭಾರಿ ಪ್ರತಿಭಟನೆ ನಡೆಸಿ ಲೇಖಕ ರವಿ ಹಂಜ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಅಲ್ಲಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯು ಎಪಿಎಂಸಿ ಮುಂಭಾಗದ ರಸ್ತೆ ಮೂಲಕ ಬಸ್ ನಿಲ್ದಾಣ ಮಾರ್ಗವಾಗಿ ತಹಶೀಲ್ದಾರ್ ಕಾರ್ಯಾಲಯಕ್ಕೆ ತಲುಪಿ ಅಲ್ಲಿ ಸಭೆಯಾಗಿ ಮಾರ್ಪಟ್ಟಿತು.

ನಂತರ ಉಪ ತಹಶೀಲ್ದಾರ್ ಐ.ಆರ್. ಚವ್ಹಾಣ ಅವರಿಗೆ ಸರ್ಕಾರಕ್ಕೆ ಬರೆದ ಮನವಿ ಪತ್ರವನ್ನು ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಶ್ರೀ ಬಸವೇಶ್ವರ ಬಸವ ಸಮಿತಿ ಅಧ್ಯಕ್ಷ ಮಹಾಂತೇಶ ಮುರಾಳ,ಪಂಚಮಸಾಲಿ ಸಮಾಜದ ಅಧ್ಯಕ್ಷ ಡಾ.ವಿ.ಎಸ್.ಕಾರ್ಜಿ, ಕಸಾಪ ಅಧ್ಯಕ್ಷ ಆರ್. ಎಲ್. ಕೊಪ್ಪದ, ಕೆ.ಸಿ.ಸಜ್ಜನ, ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಕಾಶಿನಾಥ ಮುರಾಳ, ಎಂ.ಎಸ್.ಸರಶೆಟ್ಟಿ, ಐ.ಬಿ.ಬಿಳೇಭಾವಿ, ಪ್ರಕಾಶ ಹಜೇರಿ, ಪ್ರಭು ಬಿಳೇಭಾವಿ, ಈರಣ್ಣ ಕಲ್ಬುರ್ಗಿ, ಜಗದೀಶ ಬಿಳೇಭಾವಿ, ಅಪ್ಪುಗೌಡ ಪಾಟೀಲ, ಎಸ್.ಸಿ.ಪಾಟೀಲ, ಲಂಕೇಶ ಪಾಟೀಲ, ಸಿದ್ದನಗೌಡ ಹೊಟ್ಟಿ, ಬಸ್ಸು ಕಶೆಟ್ಟಿ, ರಾಘವೇಂದ್ರ ಮಾನೆ, ರವಿ ಚಂದುಕರ, ನವೀನ್ ಗೋನಾಳ, ಸಂಗಮೇಶ ಬಿಳೇಭಾವಿ, ಮಾನಸಿಂಗ್ ಕೊಕಟನೂರ, ಆರ್.ವಿ ಜಾಲವಾದಿ, ಬಾಬು ಹಜೇರಿ, ಚಿಂತಪ್ಪಗೌಡ ಯಾಳಗಿ, ಅಶೋಕ ಜಾಲವಾದಿ, ಮಂಜುನಾಥ ಶೆಟ್ಟಿ, ಎಂ.ಆರ್ ಕತ್ತಿ, ಜಿ.ಸಿ. ಜಮ್ಮಲದಿನ್ನಿ, ಅಶೋಕ ಜಾಲವಾದಿ, ಡಿ.ಕೆ. ಪಾಟೀಲ, ಮುತ್ತು ಕಶೆಟ್ಟಿ, ಅಶೋಕ ಬಳಗಾನೂರ, ನಾಗರಾಜ ಬಳಿಗಾರ, ನಾಗಪ್ಪ ಚಿನಗುಡಿ, ಜಗದೀಶ ಬಿಳೇಭಾವಿ, ಅಶೋಕ ಚಿನಗುಡಿ, ನಿಂಗಣ್ಣ ಕುಂಟೋಜಿ, ಪ್ರಕಾಶ್ ಪಾಟೀಲ, ದತ್ತಾತ್ರೇಯ ಉಬಾಳೆ,